ಸದಸ್ಯರು ನೆರವಿಗೆ ಬರಬೇಕು. ಇಲಾಖೆಯ ವತಿಯಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ತೊಂದರೆಯೇನೂ ಇಲ್ಲ. ತಮಗೆ ಗೊತ್ತಿದೆ ಷೆಡ್ಯೂಲ್‌ರೇಟ್‌ನಲ್ಲಿ ಕೆಲಸ ಮಾಡದಿದ್ದರೆ ಎ. ಜಿ ಯವರು ಅಬ್ಜೆಕ್ಷನ್ ಹಾಕುತ್ತಾರೆ. ಟೆಂಡರ್ ಕೊಡುವಾಗ ಎಷ್ಟು ಪರ್ಸೆಂಟ್ ಕೊಟ್ಟರೂ ಅಬ್ಜೆಕ್ಟ್ ಮಾಡುವುದಿಲ್ಲ, ಇಲಾಖೆಯವರು ಕೆಲಸ ಮಾಡಿದರೆ ಅಬ್ಜೆಕ್ಟ್ ಮಾಡುತ್ತಾರೆ. ಆದರೂ ಈ ಎರಡೂ ಪಿಕಪ್‌ಗಳ ಕೆಲಸವನ್ನು ಇಲಾಖೆಯ ವತಿಯಿಂದ ಮಾಡಲಿಕ್ಕೆ ಸಾಧ್ಯವಿದೆ. ಈ ತಿಂಗಳಿನಲ್ಲಿಯೇ ಕೆಲಸವನ್ನು ಪ್ರಾರಂಭಮಾಡುತ್ತೇವೆ. ಕೆಲಸ ಪ್ರಾರಂಭಮಾಡುವಾಗ ಮಾನ್ಯ ಸದಸ್ಯರನ್ನು ಆಹ್ವಾನಿಸಲಾಗುತ್ತದೆ. ನಾನು ಇದರ ಬಗ್ಗೆ ಈಗಲೇ ಆದೇಶ ಕೊಡುತ್ತೇನೆ.

Presentation of White Paper

ಶ್ರೀ ರಾಮಕೃಷ್ಣ ಹೆಗಡೆ.-ಮಾನ್ಯ ಅಧ್ಯಕ್ಷರೆ, ಮೂರ್ನಾಲ್ಕು ದಿವಸಗಳ ಹಿಂದೆ ಸದನದಲ್ಲಿ ಬೆಲೆ ಏರಿಕೆಯ ಬಗೆ ಒಂದು ಶ್ವೇತ ಪತ್ರವನ್ನು ಮಂಡಿಸುತ್ತೇನೆಂದು ಹೇಳಿದ್ದೇನೆ. ಆ ಬಗ್ಗೆ ಶ್ವೇತಪತ್ರವನ್ನು ಕನ್ನಡದಲ್ಲಿ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

xx xx xx xx xx xx

Mr Speaker -- White Paper presented.

PRESENTATION OF PETITIONS

ಶ್ರೀ ಗೋವಿಂದ ಪಿ. ಒಡೆಯರಾಜ್.-ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಈ ವರ್ಷ ಬಹಳಷ್ಟು ಮಳೆಯಾದ್ದರಿಂದ ಮುಂಗಾರಿ ಮತ್ತು ಹಿಂಗಾರಿ ಬೆಳೆಗೆ ತುಂಬಲಾರದ ನಷ್ಟವುಂಟಾಗಿದೆ. ಆದ್ದರಿಂದ ವಿವಿಧ ಸಹಕಾರ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಂಡಂತಹ ರೈತರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸೇಡಂ ತಾಲ್ಲೂಕಿನ ಅನೇಕ ಗ್ರಾಮಗಳ ರೈತರು ಸಹಿ ಮಾಡಿರುವ ಅರ್ಜಿಯನ್ನು ತಮಗೆ ಅರ್ಪಿಸುತ್ತಿದ್ದೇನೆ.

Mr. Speaker --Petition presented

ಶ್ರೀ ಎಂ. ಎಸ್. ಪಾಟೀಲ್.-ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ತಾಲ್ಲೂಕಿನ ಲಕ್ಷ್ಮಿಕೋಡಿ ಕೆರೆ ಆಗಬೇಕೆಂದು ಸರ್ಕಾರಕ್ಕೆ ಆ ಭಾಗದ ಜನರು ಮನನ ಮಾಡಿಕೊಳ್ಳುತ್ತಿದ್ದಾರೆ. ಇದುವರೆಗೆ ಸರ್ಕಾರ ಗಮನಹರಿಸಲಿಲ್ಲ ಈಗ ಒಂದು ಸಂತೋಷದ ವಿಚಾರ ತಿಳಿದು ಬಂದಿದೆ. ಈ ಸಾರಿ ಮಾನ್ಯ ನೀರಾವರಿ ಮಂತ್ರಿಗಳು ಇದನ್ನು ತೆಗೆದುಕೊಂಡಿದ್ದಾರೆಂದು ತಿಳಿದು ಬಂದಿದೆ. ಆದರೂ ಈ ಮನವಿಯನ್ನು ಸಲ್ಲಿಸುತ್ತಿದ್ದೇನೆ.

Mr. Speaker -- Petition presented.

ಶ್ರೀ ಜೆ. ಡಿ. ಸೋಮಪ್ಪ.-- ಸ್ವಾಮಿ ನಾನು ಒಂದು ಟೆಲಿಗ್ರಾಮ್ ಕಳುಹಿಸಿದ ವಿಚಾರ ಏನಾಯಿತು? ಬಸ್ಸುಗಳು ಇಲ್ಲ, ನಾನು ಟ್ಯಾಕ್ಸಿಯಲ್ಲಿ 500 ರೂಪಾಯಿ ಕೊಟ್ಟು ಬಂದಿದ್ದೇನೆ. ಬಸ್ಸುಗಳು ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು.-- ನೀವು ಕಳುಹಿಸಿದ ಟೆಲಿಗ್ರಾಂ ನಿಧಾನವಾಗಿ ಬಂದಿದೆ. ನೀವು ನನ್ನ ಛೇಂಬರಿಗೆ ಬಂದು ಮಾತನಾಡಿ.

Annexure

LEGISLATIVE BUSINESS

[Motion to Consider]

The Karnataka Zilla Parishad, Taluk Panchayat Samitis, Mandal Panchayats And Nyaya Panchayats Bills, 1983.

Mr. Speaker -- Now we will take up further discussion moved by the Hon'ble Minister.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).-- ಮಾನ್ಯ ಅಧ್ಯಕ್ಷರೆ, ಇದೊಂದು ಮಹತ್ವಪೂರ್ಣವಾದಂಥ ಮಸೂದೆ...

ಶ್ರೀ ಎಸ್. ಭೀಮಣ್ಣ ಖಂಡ್ರೆ.-- ನಾನು ಇದರ ಬಗ್ಗೆ ಕ್ರಿಯಾಲೋಪವನ್ನು ಎತ್ತುತ್ತೇನೆ.

ಉಪಾಧ್ಯಕ್ಷರು.-- ಮಾನ್ಯ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಲಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ -- ಮಾನ್ಯ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡುವುದಕ್ಕೆ ನನ್ನ ಕ್ರಿಯಾಲೋಪವಿದೆ. ನಿಯಮ 333ರ ಪ್ರಕಾರ ಎಕ್ಸ್‌ಪ್ಲೇನ್ ಮಾಡುವುದಕ್ಕೆ ಆಗುವುದಿಲ್ಲವೆಂದು ನನ್ನ ಅಬ್ಜೆಕ್ಷನ್. ಮಾನ್ಯ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಿದರೆ ನನ್ನ ಕ್ರಿಯಾಲೋಪ ಉಳಿಯುವುದಿಲ್ಲ. ಆದ್ದರಿಂದ ಮೊದಲು ನನ್ನ ಕ್ರಿಯಾಲೋಪ ಡಿಸೈಡ್ ಆಗಬೇಕು.

ಉಪಾಧ್ಯಕ್ಷರು.-- ನಾನು ನಿನ್ನೆ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನೆಂದು ಓದಿದ್ದೇನೆ. ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಲಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ.-- ಮಾನ್ಯ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡುವುದಕ್ಕೆ ಮೊದಲೇ ನಾನು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ.

Mr. Deputy Speaker.--Let him explain first.

Sri S Bhimanna Khandre.-- Sir, the Hon'ble Minister has, introduced the Bill and now before taking the Bill for consideration. I have raised a Point of Order. I have to explain the Point of Order, you have to hear me and then give a decision and afterwards let the Minister explain the Bill. ಮಾನ್ಯ ಅಧ್ಯಕ್ಷರೆ, ಈ ಜಿಲ್ಲಾ ಪರಿಷತ್ ಪಂಚಾಯತ್ ಮಸೂದೆ 23-6-1983 ರಂದು ಗೆಜೆಟ್‌ನಲ್ಲಿ ಬಂತು. ಮುಂದೆ 11-8-83 ರಂದು ಇದನ್ನು ಇಂಟ್ರೊಡ್ಯೂಸ್ ಮಾಡಿದರು. ಈ ಸದನದಲ್ಲಿ ಆಗ ಇದು ಬಂದನಂತರ ಇದನ್ನು 12-8-83 ರಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರು. This Bill was adopted by the Joint Select Committee on 26-11-1983.

ಜಂಟಿ ಸಲಹಾ ಸಮಿತಿ ಮಾಡಿದ ಸೂಚನೆ ಮತ್ತು ಶಿಫಾರಸ್ಸುಗಳನ್ನು ಕೊಟ್ಟನಂತರ ಸರ್ಕಾರದವರು ಅದನ್ನು ಅನುಸರಿಸಿ ಮತ್ತೊಮ್ಮೆ ಪ್ರಿಂಟ್ ಮಾಡಿದ್ದಾರೆ. ಆದರೆ ಸಮಿತಿಯಲ್ಲಿ ಸೂಚಿಸಿದ ಸಲಹೆ ಶಿಫಾರಸ್ಸುಗಳನ್ನು ಇದರಲ್ಲಿ ಸೇರಿಸಿಲ್ಲ The Bill should come before the House as per the recommendations of the Joint Select Committee, ಈ ಪ್ರಕಾರವಾಗಿ ಬಂದಿಲ್ಲ. ಇದಕ್ಕಾಗಿ ಈ ಪಾಯಿಂಟ್ ಆಫ್ ಆರ್ಡರ್. ಉದಾಹರಣೆಗೆ.-- Sir, in chapter I of the Bill, the Joint Select Committee decided to insert the word "Hamlet" after the words "Revenue Village" wherever it occurs, but it was not followed in Joint Select Committee Report, Please see sub-clause 30 of clause 2, page No. 5.

The Joint Select Committee decided to add the words "IN THE" between the words 'Candidate' and election in the last line of sub-clause V, Clause 21 of the original Bill. It was not followed and not added in the Joint Select Committee Report. Please see page 22, Clause 21, sub-clause V.

The Joint Select Committee decided to add the word 'not' in between the words 'is' and "authorised" clause 32, sub-clause (i) (e) in original Act Please see page No. 211 of the Report. But it was not followed and mentioned in the Joint Select Committee Report. See page 27 of the report.

In Chapter IV, on page 214 of the Report in clause 58 (new clause 56), the Committee decided to recast item (XI) of sub-clause (i) (a) as follows regulation of building, shops of shows and eating and entertainment and House, and also decided to insert the following items in sub-clause (i) (a).

"And such other activities as prescribed by the Mandal Panchayats".

These decisions were not incorporated in the report of the

Joint Select Committee. Please see page 39, clauses 56 and 58 of the report.

In item IX of sub-clause (a) (e) (Sec. 58-56) the committee desired to know whether the miner religious institutions defined under this clause come under the purview of the Charitable and Religious Endowment Act.

This aspect has not been clarified in the report.

In clause 62, sub-clause 3 (a) the committee suggested that the up-pradhan should be the president for the social Justice Committee and Pradhan should be the President for the other three committees. It was not incorporated in Committee's report

Similarly, in clause 63 (original Bill) (Clause 61 of the Joint Select Committee report), the committee suggested that in sub-clouse I (a), the following shall be substituted.

"An emergent meeting can be convened within 24 hours".

This decision of the Joint Select Committee has not been incorporated in the final report.

In clause 64 of the original Bill (Section 62 of the Report) the committee suggested that the lease period in the Bill should be changed as for every two years instead of five years which was not mentioned in the report.

In Clause 75 of the original Bill (Clause 73 of the report). the Committee suggested that in line two the words "Injuries" shall be deleted but it was not followed in the report In sub-clause (3). committee suggested that the word 'injuries' shall be deleted but it was not followed,

Mr. Deputy Speaker.-- As I could understand that your grievance is that the recommendations made by the Joint Select Committee have not at all been incorporated in the Bill. That is your first grievance.

Sri S. Bheemanna Khandre.-- Sir, let me submit first. In clause (4) of Sec. 76 of the original Bill (section 74 of the report). the Committee suggested that some sentences which are missing should be incorporated. This was not cleared and filled up in the report.

Mr. Deputy Speaker.-- Explain your grievance.

Sri S. Bheemanna Khandre.-- Let me finish. I am bringing to the notice of the Chair, what are the things left and which should be incorporated in the Bill.

Sri Bapugowda Darshanapura.-- Sir, I rise to a point of order.

Sri S. Bheemanna Khandre.-- There cannot be another point of order on a point of order.

Mr. Deputy Speaker.-- I would like to know, under what rule, you are raising the point of order.

Sri S. Bheemanna Khandre -- Let me explain

Mr. Deputy Speaker.-- Please explain your grievance.

Sri S. Bheemanna Khandre.-- That is what I am explaining. Sir, in sub-clause 1, item (4) (in Clause 77 of the original Bill) the committee suggested that in line two for the word 'pool' the word 'Poll' be substituted. This has not been rectified in the report.

Mr. Deputy Speaker.-- All these things, you can bring through amendments. We are not at the stage of considering the amendments.

ಶ್ರೀ ಎ. ಲಕ್ಷ್ಮೀಸಾಗರ್.-- ಜಾಯಿಂಟ್ ಸೆಲೆಕ್ಟ್ ಕಮಿಟಿ ಕೊಟ್ಟಂತಹ ಶಿಫಾರಸ್ಸುಗಳನ್ನು ಇಲ್ಲಿ ಕೊಟ್ಟಿರುವಂಥ ವರದಿಯಲ್ಲಿ ಸೇರಿಸಿಲ್ಲವೆಂಬುದು ಮಾನ್ಯ ಸದಸ್ಯರ ಮೊದಲನೇ ವಾದ. ಅದಕ್ಕೆ ಉದಾಹರಣೆಗಳನ್ನು ಬರೆದುಕೊಂಡು ಬಂದು ಓದುತ್ತಿದ್ದಾರೆ. ಅವರು ತಮ್ಮ ವಾದ ಸರಿಯಾಗಿದೆಯೋ ಎಂದು ಖಚಿತಪಡಿಸಿ ಕೊಟ್ಟರೆ ಸಾಕು. ಅವರ ವಾದದಲ್ಲಿ ಯಾವುದೂ ಹುರುಳಿಲ್ಲವೆಂದು ಕಾಣುತ್ತದೆ. ಎಲ್ಲವೂ ಇದರಲ್ಲಿ ಇದೆ.

Sri S. Bheemanna Khandre.-- I have raised a point of order. I am explaining it Before hearing, what I have to say, if the Hon. Minister for Law and Parliamentary Affairs was to say that it is not necessary, then it is very difficult for me to explain my point of order.

Mr. Deputy Speaker.-- I want to know from the hon. Member the reasons for which this Bill cannot be taken up for explanation. You must satisfy me on that point. As I know, ou are reading one by one saying that this and that has not been included.

ಶ್ರೀ ಎಸ್. ಭೀಮಣ್ಣ ಖಂಡ್ರೆ.-- ಯಾವ ಪಾಯಿಂಟ್ ಮೇಲೆ ಈ ಪಾಯಿಂಟ್ ಆಫ್ ಆರ್ಡರ್ ಇದೆಯೋ ಅದನ್ನು ತೋರಿಸುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.-ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖಂಡ್ರೆಯವರು ಯಾವುದೋ ಟೈಪ್ ಮಾಡಿದನ್ನು ಇಲ್ಲಿ ಓದುತ್ತಾ ಇದ್ದಾರೆ. ಈ ಸಭೆಯ ಮುಂದೆ ಪ್ರಿಂಟ್ ಮಾಡಿದ ರಿಪೋರ್ಟ್ ಅನ್ನು ಕೊಡಲಾಗಿದೆ. ಇದರಲ್ಲಿ ಕ್ಲಾಸ್ ಕೊನೆಯಲ್ಲಿ ಬಂದಾಗ ಆವಾಗ ಬೇಕಾದರೆ ಅಮೆಂಡ್‌ಮೆಂಟ್ ತರಬಹುದು ಇವರು ಈಗ ಏನು ಹೇಳುತ್ತಾ ಇದ್ದಾರೋ ಅದು ಆ ಬಿಲ್‌ನಲ್ಲಿ ಇನ್‌ಕಾರ್ಪೋರೇಟ್ ಆಗಿಲ್ಲದೇ ಹೋದರೆ ಹೇಳಬಹುದು ಇವರು ಬೇರೆ ಯಾವುದೋ ಟೈಪ್ ಮಾಡಿ ಅದನ್ನು ಇಲ್ಲಿ ತುಂದು ಓದುತ್ತಾ ಇದ್ದಾರಲ್ಲಾ ಅದಕ್ಕೂ ಇದಕ್ಕೂ ಏನು ಸಂಬಂಧ ಇದೆಯೋ ಏನೋ ನನುಗೆ ಗೊತ್ತಾಗುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ -ಈ ವಾಗ ಅವರು ಇಲ್ಲಿ ವರ್ಡ್ ಬೈ ವರ್ಡ್ ಕ್ಲಾಸ್ ಬೈ ಕಾಸ್ ತೆಗೆದು ಕೊಂಡು ಪಾಸ್ ಮಾಡಿಸುತ್ತಾ ಇಲ್ಲ. ಅದು ಬಂದಾಗ ನೋಡೋಣ.

ಶ್ರೀ ಅಬ್ದುಲ್ ನಜೀರ್ ಸಾಬ್ -ಮಾನ್ಯ ಸದಸ್ಯರು, ಯಾವುದೋ ಒಂದು ದೊಡ್ಡ ಪಟ್ಟಿಯನ್ನು ತಂದು ಇಲ್ಲಿ ಓದುತ್ತಾ ಇದ್ದಾರೆ. ಅವರು ಇಲ್ಲಿ ಹೇಳತಕ್ಕಂಥಾದ್ದನ್ನು ಮೊದಲೇ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಒಪ್ಪಿದ್ದೇವೆ. ಆ ಒಂದುವೇಳೆ ಇವರು ಹೇಳಿದ್ದು ಅದರಲ್ಲಿ ಬಂದಿಲ್ಲ ಎಂದರೆ ಅದನ್ನು ತಿದ್ದುಕೊಳ್ಳುವುದಕ್ಕೂ ಕೂಡ ಅವಕಾಶ ಇದೆ. ಒಂದುವೇಳೆ ಪ್ರಿಂಟ್‌ನಲ್ಲಿ ತಪ್ಪಾಗಿರಬಹುದು, ಅದರಲ್ಲಿ ತಪ್ಪಿದ್ದರೂ ಸಹ ತಿದ್ದುಕೊಳ್ಳುವುದಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಮುಖಾಂತರ ಎತ್ತುವುದರ ಬದಲು ಮೊದಲು ನಾನು ಈ ಬಿಲ್ಲಿನ ವಿವರಣೆಯನ್ನು ಕೊಟ್ಟನಂತರ ಅವರು ಮಾತನಾಡಬಹುದು. ಆವಾಗ ಅದರಲ್ಲಿ ಏನಾದರೂ ತಪ್ಪು ಕಂಡುಬಂದರೆ ಅದನ್ನು ಸರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗೇ ಮಾಡೋಣ.

ಶ್ರೀ ಭೀಮಣ್ಣ ಖಂಡ್ರೆ.-ಈಗ ಇದು ಅಮೆಂಡ್‌ಮೆಂಟ್ ಪ್ರಶ್ನೆ ಅಲ್ಲ. ನಾನು ಅದರ ಬಗೆ ಮಾತನಾಡುತ್ತಲೂ ಇಲ್ಲ. ಈಗ ಈ ಸಭೆಯ ಮುಂದೆ ನೀವು ಏನು ಮಸೂದೆಯನ್ನು ತಂದಿದ್ದೀರೋ ಅದರ

ಬಗ್ಗೆ ಚರ್ಚೆ ಮಾಡಬಹುದೋ ಇಲ್ಲವೋ ಎನ್ನುವುದಕ್ಕೆ ಸ್ವಲ್ಪ ತಾವು ನಾನು ಹೇಳುವುದನ್ನು ಕೇಳಿರಿ. ಆಮೇಲೆ ಮಾತನಾಡೋಣ. ಈಗಲೇ ನಾನು ಹೇಳುವುದಕ್ಕಿಂತ ಮೊದಲೇ ಹಾಗಿರಬಹುದು, ಹೀಗಿರಬಹುದು ಅಂತ ಹೇಳುವುದು ಬೇಡ. ನನಗೆ ಅವಕಾಶ ಕೊಡಿ, 10 ನಿಮಿಷದಲ್ಲೇ ಇದನ್ನು ಓದಿ ಮುಗಿಸಿಬಿಡುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.-ಬಹುಶ. ಮಾನ್ಯ ಸದಸ್ಯರು ಓದುತ್ತಾ ಇರತಕ್ಕಂಥಾದ್ದು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ನಾವು ಏನು ಡೇ ಟು ಡೇ ಅಲ್ಲಿ ರೀಡಿಂಗ್ ಮಾಡುತ್ತಿದ್ದೆವೋ ಅದನ್ನು ಟೆಂಟೆಟೀವ್ ಬೇಸಿಸ್ ಮೇಲೆ ಮಾಡಿದ್ದು, ಅದನ್ನು ಇಲ್ಲಿ ಓದುತ್ತಾ ಇದ್ದಾರೆ. ಕೊನೆಯದಾಗಿ ಆ ರಿಪೋರ್ಟ್‌ಗೆ ಸೈನ್ ಆಗಿ ಏನು ಬರುತ್ತದೋ ಅದು ಇಲ್ಲಿ ಸಭೆಯ ಮುಂದೆ ಬರುತ್ತದೆ. ನಾವು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಮೊದಲು ಅನೇಕ ರೀತಿಯಲ್ಲಿ ವಾದ ಮಾಡುತ್ತೇವೆ, ಅದೆಲ್ಲಾ ಇಲ್ಲಿ ಬರುವುದಿಲ್ಲ. **The hon. Member is quoting the day-to-day proceeding of the meetings of the Joint Select Committee. It is not the final report of the Joint Select Committee. The final report is one which is signed by all the members finally.**

ಶ್ರೀ ಎಂ. ಎಸ್. ಕೃಷ್ಣನ್.-ಮಾನ್ಯ ಸದಸ್ಯರು ಕೈಯಲ್ಲಿ ಹಿಡಿದಿರುವುದನ್ನು ನೋಡಿದರೆ ಅವರು ಟೈಪು ಮಾಡಿಸಿಕೊಂಡು ಬಂದು ಓದುತ್ತಾ ಇರುವುದು ಕಾಣುತ್ತಾ ಇದೆ. ಪ್ರಿಂಟಿಗೂ ಟೈಪ್‌ಗೂ ವ್ಯತ್ಯಾಸ ಏನು ಇದೆಯೋ ಗೊತ್ತಿಲ್ಲ. ಮುಂದೆ ಇದರ ಬಗ್ಗೆ ಅಮೆಂಡ್‌ಮೆಂಟ್ ಬಂದಾಗ ಅವರು ಹೇಳಿದ್ದು ಇದರಲ್ಲಿ ಸೇರಿಲ್ಲ ಎಂದರೆ ಮಾನ್ಯ ಸದಸ್ಯರು ಹೇಳುವುದರಲ್ಲಿ ಅರ್ಥವಿರುತ್ತದೆ ಆವಾಗ ಅವರು ಇದನ್ನು ಏತಕ್ಕೆ ಸೇರಿಸಲಿಲ್ಲ ಅಂತ ಕೇಳಬಹುದು.

Sri K. G. Maheshwarappa.-I rise to a point of order.

Sri Bheemanna Khandre.-There cannot be another point of order on a point of order.

ಶ್ರೀ ಎಸ್. ಸೂರ್ಯನಾರಾಯಣ ರಾವ್.-ಅವರು ಈಗ ಏನು ಅಮೆಂಡ್‌ಮೆಂಟ್ ತಂದು ಇಲ್ಲಿ ಓದುತ್ತಾ ಇದ್ದಾರೋ ಅದನ್ನು ಆಮೇಲೆ ತರಲಿ. ಕೊನೆಯಲ್ಲಿ ಏನಾದರೂ ಕೂಡ ಅದು ಈ ಬಿಲ್‌ಗೆ ವಿರೋಧವಾಗಿದ್ದರೆ ಅದು ಬೇರೆ ವಿಚಾರ, ಆವಾಗ ಮಾತನಾಡಬಹುದು. ಮೊದಲು ಇದರ ಬಗ್ಗೆ ಅಮೆಂಡ್‌ಮೆಂಟ್ ತಂದಾಗ ಆಮೇಲೆ ಮಾತನಾಡಲಿ.

Sir K.G. Maheshwarappa.-Sri. I rise to a point of order. Sir. I quote rule 86 of the rules of proceuure and conduct of Business in the House. It reads thus.

"After the presentation of the final report of a Select Committee on a Bill, the member-in-charge may move.

Now it has been moved.

"(a) that the Bill as reported by the Select or Joint Select Committee be taken into consideration --

Provided that any member of the House may object to its being so taken into consideration if a copy of the report has not been made available for the use of members for three days and such objections shall prevail unless the speaker allows the Bill to be taken into consideration ...."

Here, the copy of the report has been made available to the hon. Member well in advance. He has exhaustively studied. ಇದರ ಬಗ್ಗೆ ಅಮೆಂಡ್‌ಮೆಂಟ್ ಬಂದಾಗ, ಕ್ಲಾಸ್ ಬೈ ಕ್ಲಾಸ್ ತೆಗೆದುಕೊಂಡು ಬಂದಾಗ ಆವಾಗ ಇವರು ಏನು ಹೇಳಬೇಕೋ ಅದನ್ನು ಹೇಳಬಹುದು. ಅಥವಾ ಇದರ ಬಗ್ಗೆ ಕಾಪೀಸ್ ಕೊಡದೇ ಹೋದರೆ ಆವಾಗ ಅದೂ ಸಹ ವ್ಯಾಲೆಡ್ ಅಬ್ಜೆಕ್ಷನ್ ಆಗುತ್ತದೆ. ಈವಾಗ ಈ ಮನೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಪ್ರಿಂಟ್ ಮಾಡಿಸಿ ಮುಂಗಡವಾಗಿಯೇ ಕೊಟ್ಟಿದ್ದಾರೆ. ಹಿಂದಿನ ಸರ್ಕಾರದವರು ಈ ತರಹವಾಗಿ ಇಂಗ್ಲಿಷ್

ಮತ್ತು ಕನ್ನಡ ಎರಡರಲ್ಲೂ ಪ್ರಿಂಟ್ ಮಾಡಿಸಿ ಮುಂಗಡವಾಗಿ ಕೊಡುತ್ತಿರಲಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಹೇಳಿರುವುದನ್ನು ಇಲ್ಲಿ ಹೇಳಿದ್ದಾರೆ. ಆದರೆ ಈವಾಗ ಮಾನ್ಯ ಸದಸ್ಯರು ಯಾವ ಉದ್ದೇಶದಿಂದ ಇದನ್ನು ಅಡ್ಡಿ ಮಾಡುತ್ತಿದ್ದಾರೋ ಗೊತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.-- ಮಾನ್ಯ ಸದಸ್ಯರು ಅವರ ಮನಸ್ಸಿನಲ್ಲಿ ಏನೋ ಇಟ್ಟುಕೊಂಡು ಇಲ್ಲಿ ಹೇಳುತ್ತಿದ್ದಾರೆ. ಅವರು ಮಾತನಾಡುವುದಕ್ಕೆ ಮೊದಲು ಅವರು ಚಸ್ಮ ತೆಗೆಯಲಿ.

ಶ್ರೀ ಪಂಪಾಪತಿ.-- ಮಾನ್ಯ ಖಂಡ್ರೆಯವರು ಅವರನ್ನು ಕುರಿತು ಚಸ್ಮ ತೆಗೆಯಲ್ಲಿ ಅಂತ ಹೇಳಿದರಲ್ಲೂ, ಮೊದಲು ಇವರು ತೆಗೆಯಲಿ ಸ್ವಾಮಿ.

Mr. Deputy Speaker.-- I would like to know from the hon. Member Sri Bheemanna Khandre, under which rule he is raising the point of order.

Sri Bheemanna Khandre.-- Under rule 333. I quote rule 333 (2) Which reads thus --

> "A point of order may be raised in relation to the business before the House at the moment.
>
> Provided that the Speaker may permit member to raise a point of order during the interval between the termination of one item of business and the commencement of another if it relates to maintenance of order in, or arrangement of business before the House."

Sir. apart from this I have also given notice under rule 86 read with 89 of the rules of procedure and conduct of Business in the House. para-1 of my notice reads thus:

> Though the report of Joint Select Committee on the Karnataka Zilla Parishad Bill made available to the members, but after going through it, it is found that this amended Bill, submitted by the Joint Select Committee, is imperfect, most defective in nature and illegal under the following grounds"

Mr. Deputy Speaker.-Rule 86 is also not in your favour. I will read rule 89. It speaks thus :

> "If notice of an amendment to a clause or Schedule of the Bill has not been given one clear day before the day on which the Bill is to be considered, any member my object to the moving of the amendment and such objection shall prevail unless the Speaker allows the amendment to be moved."

Therefore, we are not at the stage of considering the amendment. I give ruling now...

Sri Bheemanna Khandre.-Sri, I have raised a point of order. I may be right or wrong but please hear me first. Let me have my say first. It is for the first time that you are giving ruling before hearing.

Mr. Deputy Speaker.-- Rule 86 read with 89 will come into operation only when an amendment is moved. You have given statement of amendments.

Sri Bheemanna Khandre.-- I have not given the statement.

Mr. Deputy Speaker.-- This is your statement (showing it to the hon. Member Sri Bheemanna Khandre). You statement is self-explanatory.

ಶ್ರೀ ಎಸ್. ಭೀಮಣ್ಣ ಖಂಡ್ರೆ.-- ನಾನು ಎಕ್ಸ್‌ಪ್ಲೈನ್ ಮಾಡಬೇಕು. ನಾನು ಎಕ್ಸ್‌ಪ್ಲೈನ್ ಮಾಡದೆ ತಾವು ಹೇಗೆ ರೂಲಿಂಗ್ ಕೊಡುತ್ತೀರಿ ?

11-30 A. M.

ಶ್ರೀ ಅಬ್ದುಲ್‌ನಜೀರ್‌ಸಾಬ್.--ಮಾನ್ಯ ಅಧ್ಯಕ್ಷರೇ, ಮಾನ್ಯ ಖಂಡ್ರೆಯವರು ಈ ಮನೆಯ ಹಿರಿಯ ಸದಸ್ಯರು. ಅವರು ಯಾವಾಗಲೂ ಹಳ್ಳಿಗಾಡಿನ ಬದುಕಿನ ಬಗೆ ಕಳಕಳಿ ಇರತಕ್ಕಂಥವರು, ಹಳ್ಳಿಗಾಡಿನ ಬದುಕಿನ ಬಗ್ಗೆ ಒಂದು ಹೊಸ ತಿರುವನ್ನು ಕೊಡತಕ್ಕಂಥ ಈ ಮಸೂದೆ ಬಂದಾಗ ಅವರು ಅದರ ಬಗ್ಗೆ ಏನು ಹೇಳಲಿಕ್ಕೂ ಸರ್ವತಂತ್ರ ಸ್ವತಂತ್ರರು. ಅವರು ಯಾವ ಉದ್ದೇಶದಿಂದ, ಯಾವ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಅದು ನನಗೆ ಅರ್ಥ ಆಗಿಲ್ಲ ತಮ್ಮ ಪ್ರಸ್ತಾಪ ಏನು ? ಅನೇಕ ಸಲಹೆಗಳನ್ನು ಜಂಟಿ ಸಲಹಾ ಸಮಿತಿ ಕೊಟ್ಟಿತ್ತು ಅದು ಈ ಮಸೂದೆಯಲ್ಲಿ ಅಳವಟ್ಟಿಲ್ಲಿ ಎಂದು ಹೇಳುತ್ತಿದ್ದೀರಿ ? ಜಾಯಿಂಟ್ ಸೆಲೆಕ್ಟ್ ಕಮಿಟಿ ಸಭೆ ಸೇರಿದಾಗ ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದೇವೆ. ಅದು ಸೇರಿಲ್ಲ ಎಂದು ಹೇಳುತ್ತಿದ್ದೀರಿ. ತಾವು ಏನು ಹೇಳುತ್ತಿದ್ದೀರಿ ಅದು ಯಾವುದೂ ನನಗೆ ಅರ್ಥ ಆಗುತ್ತಿಲ್ಲ ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಹೇಳಬೇಕಾದುದು ಏನಂದರೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಯಾವ ರೀತಿ ರಿಪೋರ್ಟ್ ಕೊಡುತ್ತದೆ ಎಂದರೆ ಪೂರ್ಣ ರೀತಿಯಲ್ಲಿ, ವಿಚಾರ ವಿನಿಮಯವನ್ನು ನಡೆಸಿ, ಅಭಿಪ್ರಾಯಗಳನ್ನು ರೆಕಾರ್ಡ್ ಮಾಡಿ ಕೊನೆಯ ದಿನ ನಾವು ಸಭೆ ಸೇರಿದಾಗ ಇಂತಹ ಸಂದರ್ಭಗಳನ್ನು ಒಪ್ಪಿ ಯಾವುದಕ್ಕೆ ರುಜು ಮಾಡುತ್ತೇವೆ ಅದು ಮಾತ್ರ ಸಮಿತಿಯ ವರದಿಯಾಗಲು ಸಾಧ್ಯ. ಈ ವರದಿಯಲ್ಲಿ ಏನಾದರೂ ಬಿಟ್ಟಿದ್ದೇವೆಯೆ ಎಂಬುದನ್ನು ಹೇಳಿ ದಿನನಿತ್ಯ ನಡೆದ ಪ್ರೊಸೀಡಿಂಗ್ಸ್ ತೆಗೆದುಕೊಂಡು ನೀವು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ. ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಈ ಹಂತದಲ್ಲಿ ಅರ್ಥ ಇಲ್ಲ.

Mr. Deputy Speaker.-- Now I read the notice of Hon'ble Member Sri. Bheemanna Khandre, who has given his objection in writing. I read and also give my ruling.

"This is the notice under section 86 read with rule 89 of the Rules of Procedure and Conduct of Business"

Sir,

Though the Report of the Joint Select Committee on the Karnataka Zilla Parishad Bill made available to the Members, but after going through it, it is found that this amended Bill submitted by the Joint Select Committee is imperfect, most defective in nature and illegal under the following grounds.

So many decisions, suggestions, recommendations and directions of the Joint Select Committee were not incorporated in the report as shown in the annexed list parawise.

So the Bill as reported by the Joint Select Committee is not the actual report of the Joint Select Committee. So until and unless the real Joint Select Committee Report on the Karnataka Zilla Parishad Bill incorporating with all amendments of the Bill as per the decision of the Joint Select Committee is brought before the House for consideration, the Hon'ble Minister in-charge of the Bill cannot put this Bill in the House for consideration.

Under the above circumstances. the so-called Joint Select Committee report on the Bill be recommitted to the same Joint

Committee for further consideration of the present imperfect Bill.'

Sri Bheemanna Khandre.— Let me explain.

Mr. Deputy Speaker.— This is the gist and I have also read rule 86 and 89. I am of the opinion that if any Member aggrieved or considers that the Bill is incomplete and certain amendments to be brought and while the Bill is for consideration clause by clause, the Member if wishes to move the amendment, may move. Therefore, the Point of Order raised by Mr. Bheemanna Khandre has no substance. I over rule it.

Sri Bheemanna Khandra.—Then, I have got to explain under rule 86.

Mr. Deputy Speaker.—Your point of order is rejected.

(INTERRUPTIONS)

I have over ruled rule 86 and 89 everything.

ಶ್ರೀ ಭೀಮಣ್ಣ ಖಂಡ್ರೆ.--ನಾನು ಎಕ್ಸ್‌ಪ್ಲೈನ್ ಮಾಡುವುದಕ್ಕೆ ಮೊದಲು ತಾವು ಹೇಗೆ ರೂಲಿಂಗ್ ಕೊಡುತ್ತೀರಿ ?

ಉಪಾಧ್ಯಕ್ಷರು.--ನಾನು ರೂಲ್ 86ನ್ನು ಕವರ್ ಮಾಡಿದ್ದೇನೆ

ಶ್ರೀ ಭೀಮಣ್ಣ ಖಂಡ್ರೆ.--ಇಲ್ಲಿ ನಾನು ಸ್ಪಷ್ಟವಾಗಿ ಬರೆದಿದ್ದೇನೆ. Rule 86 Clause (b) "That the Bill as reported by the Select Committee be re-commited to the same select committee or new/select commitiee. ಈ ಅಧಿಕಾರ ರೈಸ್ ಮಾಡುವವರಿಗೆ ಇದೆ. ಗೌರ್ನಮೆಂಟ್ ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತು ಸರಿಪಡಿಸಬೇಕು ಆ ಅಧಿಕಾರ ತಮಗೆ ಇದೆ. ಮಾನ್ಯ ಮಂತ್ರಿಗಳಿಗೆ ಹೇತುತ್ತೇನೆ, ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್‌ನಲ್ಲಿ ಯಾವ ವಿಷಯ ಬರೆದಿದ್ದೀರಿ ? ಯಾವುದನ್ನು ಬಿಟ್ಟಿದ್ದೀರಿ ಎಂದು ಗೊತ್ತಾಗುತ್ತಿಲ್ಲ

ಶ್ರೀ ಅಬ್ದುಲ್‌ನಜೀರ್ ಸಾಬ್ --ಮಾನ್ಯ ಖಂಡ್ರೆಯವರೇ ಕುಳಿತುಕೊಳ್ಳಿ. ಜಾಯಿಂಟ್ ಸೆಲೆಕ್ಟ್ ಕಮಿಟಿಯ ಬಗ್ಗೆ ಒಂದು ಮಾತು ಹೇಳಿದರೆ ನಿಮಗೆ ಅರ್ಥವಾಗುತ್ತದೆ. ಇದು ಎಲ್ಲವೂ ಜಾಯಿಂಟ್ ಸೆಲೆಕ್ಟ್ ಕಮಿಟಿ ಕೊಟ್ಟಿರುವುದು, ಅದು ದಿಟವಾದುದು, ಸತ್ಯವಾದುದು, ಅದು ಸದನದ ಕಾನೂನಿಗೆ ಬದ್ಧವಾದುದು. ಏನು ತಾವು ಓದುತ್ತಿದ್ದೀರಿ ಅದು ಇರಬಹುದು. ಆದರೆ ಅದು ದಿಟವಲ್ಲ. ನಾವು ಸಮಿತಿಯಲ್ಲಿ ನೂರೆಂಟು ವಿಷಯಗಳನ್ನು ಮಾತನಾಡುತ್ತೇವೆ. ಅದೆಲ್ಲಾ ವರದಿಯಲ್ಲಿ ಹಾಕಿದರೆ ನಿಮಗೇ ವಿರೋಧವಾಗುತ್ತದೆ,

ಶ್ರೀ ಭೀಮಣ್ಣ ಖಂಡ್ರೆ --ನಮ್ಮ ಪಾರ್ಟಿ ವಿರುದ್ಧ ಹೋಗುತ್ತದೆ, ನಿಮ್ಮ ವಿರುದ್ಧ ಹೋಗುತ್ತದೆಂಬ ಪ್ರಶ್ನೆಯಿಲ್ಲ

ಶ್ರೀ ಅಬ್ದುಲ್‌ನಜೀರ್ ಸಾಬ್.--ತಾವು ಓದುತ್ತಿರುವ ಕಾಪಿಯನ್ನು ಎಲ್ಲಿಂದ ತಂದಿದ್ದೀರಿ ?

ಶ್ರೀ ಭೀಮಣ್ಣ ಖಂಡ್ರೆ.--ತಾವುಕೊಟ್ಟಿರುವ ಪುಸ್ತಕದಲ್ಲಿರುವುದನ್ನೇ ನಾನು ಓದುತ್ತಿದ್ದೇನೆ. ಪುಸ್ತಕದ ರೆಫರೆನ್ಸ್ ಕೊಡುತ್ತಿದ್ದೇನೆ. ಅದನ್ನು ನೋಟ್ ಮಾಡಿಕೊಂಡಿದ್ದೇನೆ. ತಾವು ಏನು ಕೊಟ್ಟಿದ್ದೀರಿ ಅದನ್ನೇ ಓದುತ್ತಿದ್ದೇನೆ

ಶ್ರೀ ಅಬ್ದುಲ್‌ನಜೀರ್ ಸಾಬ್.--ಈ ಪುಸ್ತಕದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ಕೊಟ್ಟಿದ್ದೇವೆ. ದಿಟವಾಗಿ, ನಿಜವಾಗಿ, ಸದನ ಒಪ್ಪಬೇಕಾದ ರಿಪೋರ್ಟ್ ಕೊಟ್ಟಿದ್ದೇವೆ. ಇದರಲ್ಲಿ ನಾವು ಏನು ಡಿಸ್ಕಸ್ ಮಾಡಿದ್ದೇವೆ ಅದಕ್ಕೆ ಸಂಬಧಪಟ್ಟಂತೆ ಸಂಬಂಧಪಟ್ಟ ಕ್ಲಾಸ್‌ನಲ್ಲಿ ಏನಾದರೂ ಬಿಟ್ಟಿದ್ದರೇ ಅಥವಾ ಕಾಲಮ್ ಸೇರದೇ ಇದ್ದರೆ ಅದು ಪ್ರಿಂಟ್ ಮಿಸ್ಟೇಕ್‌ನಿಂದ ಆಗಿರುವುದಕ್ಕೆ ಸಾಧ್ಯತೆ ಇದೆ, ಇನ್ನೂ ಬೇರೆ ರೀತಿಯಿಂದ ಆಗುವುದಕ್ಕೆ ಸಾಧ್ಯತೆ ಇದೆ ಇಂತಹ ತಪ್ಪುಗಳು ಕಂಡು ಬಂದರೆ ಅಧಿಕೃತವಾಗಿ ಅದಕ್ಕೆ ತಿದ್ದುಪಡಿ ತರುತ್ತೇವೆ. ಅಂತಹದು ಏನಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ. ಅದನ್ನು ಬಿಟ್ಟು ತಾವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ, ಏನೇನೋ ಓದಿದರೆ ನಾನು ಮಂತ್ರಿಯಾಗಿ ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರಲ್ಲಿ ನನ್ನ ಪ್ರಾರ್ಥನೆ ಎಂದರೆ ಬಿಲ್ಲಿನ ಬಗ್ಗೆ

ಹೇಳಿದ ಮೇಲೆ ತಮಗೆ ಪಾಸ್ ಮಾಡುವುದಕ್ಕೆ ಅಧಿಕಾರ ಇದೆ. ಸೆಕ್ಷನ್ 225, ಮತ್ತು 325ಕ್ಕೆ ತಿದ್ದುಪಡಿಗಳು ಏನಿವೆ ಅವುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಭೀಮಣ್ಣ ಖಂಡ್ರೆ.--ನಾನು ಯಾವುದನ್ನೋ ತಂದು ತೋರಿಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ, ಅದು ಅಲ್ಲ.

ಶ್ರೀ ಎಂ. ಎಸ್. ಕೃಷ್ಣನ್.--ಪುಸ್ತಕದಲ್ಲಿ ಇದೆ ಎಂದು ಹೇಳಿದರು. ಸಬ್‌ಕ್ಲಾಸ್ 2, ರೂಲ್ 25 ಇದೆ ಅದಿಲ್ಲ ಎಂದು ಹೇಳಿದರು. ಕ್ಲಾಸ್ 2 ಸಬ್‌ಕ್ಲಾಸ್ 25 ಪ್ರಿಂಟ್ ಮಾಡಿಕೊಟ್ಟಿದ್ದೀರಿ, ಅದರಲ್ಲಿ ಏನು ಹೇಳುತ್ತದೆ ಎಂದರೆ,

> "The Committee are of the opinion that the punishmend now suggested for contravention of election law near the polling station is not adequate and suggested that a person on conviction be punished with a fine which may extent to rupees two hundred instead of Rs. 250.

ಉಪಾಧ್ಯಕ್ಷರು.--ಮಾನ್ಯ ಕೃಷ್ಣನ್ ಅವರೇ ನಾನು ಈ ವಿಚಾರದಲ್ಲಿ ರೂಲಿಂಗ್ ಕೊಟ್ಟಿದ್ದೇನೆ. ಇಲ್ಲಿಗೆ ಆ ವಿಷಯವನ್ನು ಬಿಟ್ಟುಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.--500 ಸಹಾ ಇನ್‌ಕ್ಲೂಡ್ ಆಗಿದೆ, ಇವರು ಇನ್‌ಕ್ಲೂಡ್ ಆಗಿಲ್ಲ ಎಂದು ಹೇಳುತ್ತಾರೆ. ಅವರು ಬರೆದುಕೊಂಡು ಬಂದಿರುವುದು ಇನ್‌ಕ್ಲೂಡ್ ಆಗಿಲ್ಲ ಎಂದು ಕಾಣುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.--ಮಾನ್ಯ ಮಂತ್ರಿಗಳು ಹೇಳಿದರು, ಈ ಪುಸ್ತಕದಲ್ಲಿ ಬರದೇ ಇರುವುದು ಏನಿದೆ ಅದನ್ನು ಇನ್‌ಕಾರ್ಪೊರೇಟ್ ಮಾಡುತ್ತೇವೆ, ಅಮೆಂಡ್‌ಮೆಂಟ್ ತರುತ್ತೇವೆ ಎಂದು ಹೇಳಿದರು. ನಿಯಮ 86ರ ಕೆಳಗೆ ಈಗ ನಾನು ಕೇಳುತ್ತಿರುವುದು.

ಶ್ರೀ ಅಬ್ದುಲ್‌ನಜೀರ್ ಸಾಬ್.--ನಾನು ಇನ್ನೂ ಸ್ವಲ್ಪ ಹೇಳಿದರೆ ತಮಗೆ ಅರ್ಥವಾಗುತ್ತದೆ. ತಾವು ಪುಸ್ತಕದಲ್ಲಿ ಓದುತ್ತಿರುವುದು ಡೇ ಟುಡೇ ಮಿನಿಟ್ಸ್. ತಾವು ಪುಸ್ತಕದಲ್ಲಿರುವುದನ್ನು ಓದುತ್ತಿದ್ದೀರಿ. ಅದು ಡೇಟು ಡೇ ಮಿನಿಟ್‌ಗೆ ಸಂಬಂಧಪಟ್ಟದ್ದು. ಅದನ್ನು ನಮೂದು ಮಾಡಬೇಕಾಗಿಲ್ಲ. ಫೈನಲ್ ರಿಪೋರ್ಟ್ ಏನು ಕೊಟ್ಟಿದ್ದೇವೆ; ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಪುಸ್ತಕದ ಹಿಂದುಗಡೆ ಏನು ಕೊಟ್ಟಿದ್ದೇನೆ; ಅದನ್ನು ಇದರಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಕಲ್ಕತ್ತಾಕ್ಕೆ ಹೋಗಿದ್ದು; ಬಂದಿದ್ದು ಅದನ್ನೆಲ್ಲಾ ಸೇರಿಸುವುದಕ್ಕಾಗುವುದಿಲ್ಲ; ಅದೆಲ್ಲಾ ಪ್ರೊಸೀಡಿಂಗ್ಸ್‌ಗೆ ಸೇರಿದ್ದು.

ಉಪಾಧ್ಯಕ್ಷರು.-- ನಿಯಮ 86ಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಮಾತನಾಡುವುದಕ್ಕೆ ತಮಗೆ ಮೊದಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಮಂತ್ರಿಯವರು).--ಮಾನ್ಯ ಸಭಾಪತಿಯವರೇ, ಈ ದಿನ ಮಹತ್ವಪೂರ್ಣವಾದ ಹಾಗೂ ಐತಿಹಾಸಿಕವಾದ ನಿರ್ಣಯವನ್ನು ಮಾನ್ಯ ಸಭೆ ಕೈಗೊಳ್ಳಬೇಕಾಗಿದೆ. ಈ ದೇಶದ ಗ್ರಾಮೀಣ ಜನತೆಯ ಒಂದು ಅಭಿವೃದ್ಧಿಯತ್ತ ಸಾಂಘಿಕ ಶಕ್ತಿಯನ್ನು ನಿರ್ಮಾಣ ಮಾಡುವಂಥ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದು ಹೊಸದು ಎಂದು ಹೇಳುವುದಿಲ್ಲ; ಯಾವ ಒಂದು ಜನಾಂಗಗಳಿಗೆ 5,000 ವರ್ಷಗಳ ಪರಂಪರೆ ಇತ್ತು, ಅವುಗಳು ಉಳಿಯಬೇಕೆಂಬ ಬಗ್ಗೆ ಡಾ|| ಲೋಹಿಯಾರವರು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರು. ಜಾತೀಪದ್ಧತಿ ಮತ್ತು ಗ್ರಾಮೀಣ ವ್ಯವಸ್ಥೆಯಲ್ಲಿ 5,000 ವರ್ಷಗಳನಂತವೂ ಒಂದಕ್ಕೊಂದು ಪೂರಕವಾಗಿ ಸಮಾಜದಲ್ಲಿರತಕ್ಕ ಜನಶಕ್ತಿಯನ್ನು ಯಾವರೀತಿಯಾಗಿ ಹೊರ ಒತ್ತಡಗಳಿಂದ ನಿಭಾಯಿಸುತ್ತಿದ್ದರು ಎನ್ನುವುದಕ್ಕೆ ಇತಿಹಾಸ ಇದೆ. ಪಂಚಾಯಿತಿಗಳಿಂದಲೇ ಬದುಕುತ್ತಿದ್ದವು ಎನ್ನುವುದಕ್ಕೆ ಇತಿಹಾಸ ಇದೆ. ಬ್ರಿಟೀಷರು ಬಂದನಂತರವೂ ಕೂಡ ಇಂಥ ಒಂದು ಪ್ರಯತ್ನ ಮಾಡಿದ್ದಾರೆ. 1818ರಲ್ಲಿ ಲಾರ್ಡ್ ರಿಪ್ಪನ್‌ರವರ ಕಾಲದಲ್ಲಿ ಅಂದಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕ ಜನ ಇಂಥ ಒಂದು ವ್ಯವಸ್ಥೆಗೆ ಪ್ರಾಧಾನ್ಯತೆ ಕೊಟ್ಟಿದರು. ಆಗ ಎರಡು ಕರ್ತವ್ಯಗಳ ಬಗ್ಗೆ ಮಾತ್ರ ಸೀಮಿತವಾಗಿತ್ತು. ಒಂದು ಪರಂಪರಾಗತ ವ್ಯವಸ್ಥೆ ಮತ್ತೊಂದು ಪೌರ ಸೌಲಭ್ಯಗಳನ್ನು ಒದಗಿಸುವಂಥ ವ್ಯವಸ್ಥೆ. ಇವು ಒಂದಕ್ಕೊಂದು ಪೂರಕವಾಗಿ ಜಾರಿಯಲ್ಲಿದ್ದವು. ಕರ್ನಾಟಕದಲ್ಲಿ ಮಾತ್ರ ಈ ಒಂದು ಅನುಭವ ಬಹಳ ಚೆನ್ನಾಗಿ ಆಯಿತು. 1818 ರಿಂದ 28ರ ವರೆಗೆ ಮೊಟ್ಟಮೊದಲನೆಯದಾಗಿ ಸ್ಥಳೀಯ ಸಂಸ್ಥೆಗಳು ಅದರಲ್ಲಿಯೂ ಗ್ರಾಮೀಣ ಜನತೆಗೆ ಸಂಬಂಧಪಟ್ಟಂತೆ ಸ್ಥಳೀಯ ಸಂಸ್ಥೆಗಳು ಹಳೆಯ ಮೈಸೂರು ಭಾಗದಲ್ಲಿ ಯಶಸ್ವಿಯಾದವು. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ

ನೇಮಕ ಮಾಡಿದ ಸಮಿತಿಯವರು ಪೂರ್ಣ ರೀತಿಯ ಅಭಿವೃದ್ಧಿಯನ್ನು ತಾಲ್ಲೂಕು ಬೋರ್ಡುಗಳು ಮಾಡುವುದಕ್ಕಾಗುವುದಿಲ್ಲವೆಂದು ವರದಿ ಕೊಟ್ಟಮೇಲೆ ಪೌರ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾ ಬೋರ್ಡುಗಳಿಗೆ ವಹಿಸಲಾಯಿತು. ತದನಂತರ 1959ರಲ್ಲಿ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯ್ತಿಗಳನ್ನು ನಿರ್ಮಾಣ ಮಾಡಲಾಯಿತು. ಗ್ರಾಮೀಣ ಸ್ವಯಂ ಆಡಳಿತದ ವಿಚಾರದಲ್ಲಿ ಗ್ರಾಮೀಣ ಜನರಿಗೆ ಇಂಥ ಒಂದು ವ್ಯವಸ್ಥೆಯು ಕಾಯಿದೆಯ ಅಗತ್ಯ ಇತ್ತೇ ಎನ್ನುವ ಪ್ರಶ್ನೆಯನ್ನು ವಿಚಾರ ಮಾಡಬೇಕಾಗುತ್ತದೆ. 1957ರಲ್ಲಿ ಚಾಲನರಹಿತ ಸಮಾಜಕ್ಕೆ ಗತಿಯನ್ನು ಕೊಡಬೇಕೆನ್ನುವ ದೃಷ್ಟಿಯಿಂದ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು; ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಗ್ರಾಮೀಣ ಸಮಾಜಕ್ಕೆ ತಲುಪುವಂತ ಪ್ರಯತ್ನ ಮಾಡಿದರು. ಈ ದಿಸೆಯಲ್ಲಿ ಅನೇಕ ಜನ ಮುತ್ಸದ್ದಿಗಳು, ಪರಿಣತರು ಹಾಗೂ ಗ್ರಾಮೀಣ ಸಮಾಜವನ್ನು ತಿಳಿದುಕೊಂಡಿರುವಂಥವರಾದ ಕೂಡಿದ ಬಲವಂತರಾಯ ಸಮಿತಿಯನ್ನು ನೇಮಕ ಮಾಡಿದಾಗ ಅವರು ಮೂರು ಹಂತದ ಸಲಹೆಗಳನ್ನು ಸ್ವಯಂ ಆಡಳಿತದ ಬಗ್ಗೆ ಕೊಟ್ಟರು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು; ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಗ್ರಾಮೀಣ ಮಟ್ಟದಲ್ಲಿ ನೇರವಾಗಿ ಜನತೆಗೆ ಚಾಲನೆ ಸಿಗತಕ್ಕಂಥ ಮತ್ತು ಸಮಾಜಕ್ಕೆ ಅನುಕೂಲವಾಗತಕ್ಕಂಥ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕೆಂದು ಬಲವಂತರಾಯ ಸಮಿತಿಯವರು ವರದಿ ಕೊಟ್ಟರು. ಇಡೀ ದೇಶವೇ ಈ ಒಂದು ವ್ಯವಸ್ಥೆಯನ್ನು ಒಪ್ಪಿಕೊಂಡಿದೆ. ಅದರಲ್ಲಿ ಬಹು ಭಿನ್ನವಾಗಿರುವಂತಾದು; ಕರ್ನಾಟಕದಲ್ಲಿ, ಮಹಾರಾಷ್ಟ್ರದಲ್ಲಿ ಹಾಗೂ ಗುಜರಾತಿನಲ್ಲಿ, ತಾತ್ವಿಕವಾಗಿ ಜನರಿಂದಲೇ ಚುನಾಯಿಸಿದ ಪ್ರಭುತ್ವವನ್ನು ಜಿಲ್ಲಾ ಪರಿಷತ್ ಮುಖಾಂತರ ಗ್ರಾಮ ಪಂಚಾಯಿಗಳ ಮುಖಾಂತರ ನಿರ್ಮಾಣ ಮಾಡುವುದಕ್ಕೆ ಹೊಸ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ನಿರ್ಮಾಣಮಾಡಿದ್ದೇವೆ. ಬಲವಂತರಾಯ ಸಮಿತಿಯ ಪೂರ್ಣ ರೀತಿಯ ಶಿಫಾರಸ್ಸು ಏನಿದೆ ಅದರ ಪ್ರಕಾರ 60–70,000 ಜನಸಂಖ್ಯೆಗೆ ಗ್ರಾಮೀಣ ಸಮುದಾಯ ಅಭಿವೃದ್ಧಿ ಯೋಜನೆಗನುಗುಣವಾಗಿ ಬ್ಲಾಕುಗಳನ್ನಾಗಿ ಮಾಡಬೇಕೆಂದು ಸಲಹೆ ಇದ್ದರೆ, ಕರ್ನಾಟಕದಲ್ಲಿ ತಾಲ್ಲೂಕು ಘಟಕಗಳಿಗನುಗುಣವಾಗಿ ನಿರ್ಮಾಣ ಮಾಡಿದ್ದೇವೆ. ಇವತ್ತು ಕರ್ನಾಟಕದಲ್ಲಿ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯ್ತಿಗಳ ಮೂಲಕ ಮಾಡಿದ ಕೆಲಸದ ಅನುಭವವನ್ನು ರಾಷ್ಟ್ರವ್ಯಾಪ್ತಿಗೊಳಿಸಿ; ಹೊಸ ಸ್ವರೂಪವನ್ನು ಚಿಂತನೆಯನ್ನು ಪಡೆಯಲು, 1977ರಲ್ಲಿ ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಇದ್ದಾಗ ಅಶೋಕಮೆಹತಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿರ್ಮಾಣ ಮಾಡಿದರು. ಅವರು ಕೊಟ್ಟಂಥ ವರದಿಯ ಪ್ರಕಾರ ಇವತ್ತು ದೇಶದಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಗಳು; ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಈ ಚಾಲನೆ ಏನು ಕೊಟ್ಟಿದ್ದೇವೆಯೋ ಅವುಗಳ ವಿಚಾರದಲ್ಲಿ ಬಲವಂತರಾಯ ಸಮಿತಿಯವರು ಸಂಘಸಂಸ್ಥೆಗಳ ವೈಫಲ್ಯಗಳ ಬಗ್ಗೆ, ಸಾಫಲ್ಯಗಳ ಬಗ್ಗೆ ಬಹಳ ಗಂಭೀರವಾಗಿ ಅಧ್ಯಯನ ಮಾಡಿ ವರದಿ ಕೊಟ್ಟಿದ್ದಾರೆ. ಅವರು ಅಧ್ಯಯನ ಮಾಡುವಾಗ ಸಂಘಸಂಸ್ಥೆಗಳ ಬಗ್ಗೆ ಮೂರು ಹಂತದಲ್ಲಿ ವಿಚಾರ ಮಾಡಿದ್ದಾರೆ. ಮೊದಲನೆಯದು ಪ್ರಗತಿಯ ಹಂತ; ಎರಡನೆಯದು ಸ್ಥಗಿತದ ಹಂತ ಮೂರನೆಯದು ಪ್ರಾಭಲ್ಯ ಇಳಿಮುಖದ ಹಂತ. ಸಮುದಾಯ ಅಭಿವೃದ್ಧಿ ಯೋಜನೆಗಳಿಗೆ ಕೊಡತಕ್ಕ ಹಣ ಅಂದರೆ ಸುಮಾರು 12ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿರುತ್ತೆ; ಈ ಹಣವನ್ನು ವರ್ಷಕ್ಕೆ ಇಂತಿಷ್ಟು ಖರ್ಚು ಮಾಡಬೇಕೆಂದು ಇದ್ದರೂ ಸಂಘಸಂಸ್ಥೆಗಳ ಒಂದು ವ್ಯವಸ್ಥೆಯಿಂದ ಅಧಿಕಾರ ಕೂಡ ಮೊಟಕಾಯಿತು. ಇಳಿಮುಖವಾಯಿತು. 1977ರ ನಂತರ ಗ್ರಾಮೀಣ ಜನತೆಯಲ್ಲಿ. ಗ್ರಾಮೀಣ ವ್ಯವಸ್ಥೆಯಲ್ಲಿ ಹೊಸ ವಿಚಾರ ಮಾಡುವಂತಾಯಿತು. ಗ್ರಾಮೀಣ ಪ್ರದೇಶದಲ್ಲಿ ಉತ್ಪಾದನಾ ಕ್ಷೇತ್ರಕ್ಕೆ ಕೃಷಿ ಕ್ಷೇತ್ರವನ್ನು ಆರಿಸಿಕೊಳ್ಳಲಾಯಿತು. 1947ರಲ್ಲಿ ಭಾರತ 50 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದರೆ; 1984ರಲ್ಲಿ 139 ಲಕ್ಷ ಟನ್‌ಗೆ ಏರಿಕೆ ಆಗಿದೆ. ಆದರ ಮೂಲಕ ಅನೇಕ ರೀತಿಯ ಪ್ರಕ್ರಿಯೆಗಳು ನಡೆದಿವೆ. ಅದು ಪ್ರಾಯೋಗಿಕವಾಗಿರಬಹುದು; ಬೇರೆ ರೀತಿಯಲ್ಲಿರಬಹುದು. ಪ್ರಕ್ರಿಯೆಗಳು ಸಾಧನಗಳನ್ನು ಬದಲಾಯಿಸುವಂಥ ವ್ಯವಸ್ಥೆಯಲ್ಲಿರಬಹುದು. ಸಂಪತ್ತಿನ ಒಂದು ರೀತಿಯ ವಿತರಣೆಯಾಗಿದೆ. ಅದು ಶ್ರೀಮಂತರ ಮತ್ತು ಬಡವರ ಮಧ್ಯೆ ಹಂಚಿಕೆಯಾಗಿದೆಯೆಂದು ನಾನು ಹೇಳುವುದಿಲ್ಲ. ಯಾವ ಸಮಾಜ ಚಾಲನೆ ಇಲ್ಲದೇ ಇತ್ತೋ; ಜಡತ್ವದಲ್ಲಿತ್ತೋ, ಗಂಭೀರ ಪರಿಸ್ಥಿತಿಯಲ್ಲಿತ್ತೋ. ಅಂಥ ಸಮಾಜದಲ್ಲಿ ಇವತ್ತು ಚಾಲನೆ ಉಂಟಾಗಿದೆ. ಅನೇಕ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಅದು ಸಾಮಾಜಿಕವಾಗಿ ಆಗಿರಬಹುದು; ರಾಜಕೀಯವಾಗಿರಬಹುದು. ಇವತ್ತು ಅವರದೇ ಆದಂಥ ಕಾನೂನು ಬದ್ಧ ಸಾಂಘಿಕ ಶಕ್ತಿ ಬೆಳೆಯಬೇಕೆಂಬುದು ಬಹುಮಂದಿನ ಅಭಿಪ್ರಾಯ. ಶ್ರೀಮಾನ್ ನಂಬೂದಿರಿಪಾದ್‌ರವರು; ಮತ್ತು ದತ್ತಾ ಅವರಂಥ ಪ್ರಸಿದ್ಧ ಗಾಂಧೀವಾದಿಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಯಾವ ಹಂತಕ್ಕೆ ಬಂದಿದ್ದಾರೆಂದರೆ, ಗ್ರಾಮೀಣ ಜನರಲ್ಲಿ ಚಾಲನೆ ಮುಂದುವರಿಯಬೇಕಾಗಿದ್ದರೆ; ಸಮಾಜದಲ್ಲಿ ಪ್ರೇರಣೆ ಬೇಕು

ಪ್ರೇರಣೆ ಯಾವರೀತಿ ಆಗಬಹುದು, ಉತ್ಪಾದನಾ ಕ್ಷೇತ್ರದ ಪ್ರೇರಣೆ; ಸಂಪತ್ತನ್ನು ಸೃಷ್ಟಿ ಮಾಡತಕ್ಕಂಥ ಪ್ರಮುಖವಾದ ಪ್ರೇರಣೆ; ಅಂಥ ಒಂದು ಪ್ರೇರಣೆ ಉತ್ಪಾದನಾ ಕ್ಷೇತ್ರದಲ್ಲಿ ಸಂಘ ಸಂಸ್ಥೆಗಳು ಮಾಡಬೇಕಾದರೆ; ಅವುಗಳು ನೈಜವಾಗಿರಬೇಕು.

ಪಂಚಾಯಿತಿಗಳು ಪೂರ್ಣವಾಗಿ ತಮ್ಮ ಕಾರ್ಯವನ್ನು ಸಾಧನೆ ಮಾಡಿಲ್ಲ ಇದಕ್ಕೆ ಕಾರಣವೇನೆಂದರೆ, ಇರತಕ್ಕ ಮೂಲಭೂತ ಸಂಪನ್ಮೂಲಗಳು ಎರಡನೆಯದಾಗಿ ವಿಸ್ತರಣಾ ಜ್ಞಾನವನ್ನು ಹೆಚ್ಚಿಸತಕ್ಕ **Changing agency** ಅಂತ ನಾವು ಏನು ಕರೆಯುತ್ತೇವೆ; ಆ **Changing agency** ಯನ್ನು ಒದಗಿಸುವ ಚೈತನ್ಯ ಕಾರ್ಯಕ್ರಮ. ಇಷ್ಟೇ ಅಲ್ಲದೆ ಗ್ರಾಮ ಪಂಚಾಯಿತಿ ಪೂರ್ಣವಾದ ರೀತಿಯಲ್ಲಿ ಕೆಲಸ ಮಾಡಿಲ್ಲ ಎನ್ನುವ ಅಭಿಪ್ರಾಯದಿಂದ ಜಂಟಿ ಸಲಹಾ ಸಮಿತಿಯು ಒಂದು ಪೂರ್ಣ ಅಭಿಪ್ರಾಯಕ್ಕೆ ಬಂದಿದೆ. ಹಾಗಾದರೆ ಆ ಅಭಿಪ್ರಾಯ ಏನು ಎಂದರೆ ಒಂದು ಗ್ರಾಮ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಇದು ಕೇವಲ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಅಲ್ಲ ಜನತಂತ್ರದ ಅಧಿಕಾರ ವಿಕೇಂದ್ರೀಕರಣ ಜನತಂತ್ರದ ವ್ಯವಸ್ಥೆಯ ಪ್ರಕ್ರಿಯೆ. ಅಭಿವೃದ್ಧಿ ಪ್ರಕ್ರಿಯೇ ಆಗಬೇಕೆಂಬುದು ಈ ಮಸೂದೆಯ ಮೂಲ ಉದ್ದೇಶ. ಇದಕ್ಕೆ ಸೈದ್ಧಾಂತಿಕವಾಗಿ ಅಶೋಕ ಮೆಹತಾ ಸಮಿತಿಯವರು ಅಭಿವೃದ್ಧಿ ಕಾರ್ಯಗಳ ಬಗ್ಗೆ ಅನೇಕ ರಾಜ್ಯಗಳಲ್ಲಿರುವ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಹೇಳಿದ್ದಾರೆ. ಆ ದೃಷ್ಟಿಯಿಂದ ಸಂಘಟನೆ ಮಾಡಬೇಕಾಗಿದೆ. ಬಹುಮುಖವಾಗಿ ತೀರ್ಮಾನ ಮಾಡಿರತಕ್ಕ ಒಂದು ಲೋಕ ದೃಷ್ಟಿಯಿಂದ ಎರಡು ಹಂತದ ಆಡಳಿತ ವ್ಯವಸ್ಥೆ ಇವತ್ತು ಅಗತ್ಯ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಎರಡು ಹಂತದ ಆಡಳಿತ ವ್ಯವಸ್ಥೆಯಲ್ಲಿ ಮೊದಲನೆ ಹಂತವಾಗಿ ಎಲ್ಲ ಆಡಳಿತವನ್ನು ವಿಕೇಂದ್ರೀಕರಣ ಮಾಡಲು ಸಾಧ್ಯ ಎಂಬುಹರ ಬಗ್ಗೆ "ವಿಚಾರ ಮಾಡಿದ್ದೇವೆ. ಮೊದಲನೆ ಹಂತದ ವಿಕೇಂದ್ರೀಕರಣ, ಕೇವಲ ಆಡಳಿತದ ವಿಕೇಂದ್ರೀಕರಣ ಅಲ್ಲ" ಆಡಳಿತ ವಿಕೇಂದ್ರೀಕರಣ ಈಗಾಗಲೇ ಆಗಿದೆ. ಅದು ಅಲ್ಲ. ನಾವು ಮಾಡಬೇಕಾಗಿರುವಂತಹ ವಿಕೇಂದ್ರೀಕರಣ ಜನತಂತ್ರ, ಅಧಿಕಾರ ವಿಕೇಂದ್ರೀಕರಣ. ಡೆಮಾಕ್ರಟಿಕ್ ರೀಜೆಂಟ್ ವ್ಯವಸ್ಥೆ. ಇದರ ಮೊದಲ ಹಂತ ಜಿಲ್ಲೆ. ಇವತ್ತು ಜಿಲ್ಲೆಯಲ್ಲಿ ನಾನು ಹೇಳಿದಹಾಗೆ ಮೂಲಭೂತವಾಗಿ ಅಭಿವೃದ್ಧಿ ಶೀಲ ಪ್ರಕ್ರಿಯೆ ಶಕ್ತಿಯಾಗಿರಬೇಕಾಗುತ್ತದೆ" ಪ್ರೇರಣೆಯ ಶಕ್ತಿಯಾಗಿರಬೇಕಾಗುತ್ತದೆ. ಮೂಲಭೂತವಾಗಿ ಮೊದಲನೆಯದಾಗಿ ಸಂಪತ್ತು ಮತ್ತು ಉತ್ಪಾದನೆ ವ್ಯಾವಹಾರಿಕವಾಗಿ ಹೇಳುವುದಾದರೆ. ಸಾಮಾಜಿಕ ಜೀವನದಲ್ಲಿ ಸಮಾನತೆ, ಸಂಪತ್ತಿನಲ್ಲಿ ಸಮಾನತೆ, ಹಾಗೂ ಉತ್ಪಾದನೆಯಲ್ಲಿ ಸಮಾನತೆಯನ್ನು ಮನುಷ್ಯ ಸಾಮಾನ್ಯವಾಗಿ ಅಪೇಕ್ಷೆಪಡುತ್ತಾನೆ. ಈ ಮೂರನ್ನು ಒದಗಿಸಿಕೊಡುವುದಕ್ಕೆ ಅದಕ್ಕೆ ಬೇಕಾದ ಯೋಜನೆಗಳನ್ನು ನಿರ್ಮಾಣ ಮಾಡಬೇಕಾಗಿದ್ದರೆ, ಜಿಲ್ಲಾ ಮಟ್ಟದಲ್ಲಿ ಅದಕ್ಕೆ ಬೇಕಾದ ತಾಂತ್ರಿಕ ಮತ್ತು ಆಡಳಿತ ನೈಪುಣ್ಯತೆ ಈಗಾಗಲೇ ನಮಗೆ ಸಿಕ್ಕಿದೆ. ಮೊದಲು ಆಡಳಿತ ವಿಕೇಂದ್ರೀಕರಣವಾಗತಕ್ಕ ಮೊದಲ ಹಂತವನ್ನು ಜಿಲ್ಲೆಯನ್ನಾಗಿ ಪರಿಗಣಿಸಬೇಕು. ಆ ಜಿಲ್ಲೆಗೆ ಸಂಬಂಧಪಟ್ಟಂತಹ ಯೋಜನೆಗಳು, ಆ ಯೋಜನೆಗಳನ್ನು ಪೂರ್ಣವಾಗಿ ಜಾರಿಗೆ ತರತಕ್ಕ ಚೈತನ್ಯ. ಆ ಜಿಲ್ಲೆಯ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಯೋಜನೆಗಳನ್ನು ನಿರ್ಮಾಣ ಮಾಡತಕ್ಕ ತಾಂತ್ರಿಕ ವ್ಯವಸ್ಥೆ, ತಾಂತ್ರಿಕ ಪ್ರಾವಿಣ್ಯತೆ ಹಾಗೂ ಆಡಳಿತದ ಪ್ರಾವಿಣ್ಯತೆ ಇವೆಲ್ಲ ಜಿಲ್ಲಾ ಮಟ್ಟದಲ್ಲಿ ಆಗಬೇಕು. ಇದಕ್ಕೆ ಒಂದು ಜಿಲ್ಲಾ ಪರಿಷತ್ತು ಅಂತ ಇರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದು ಮೊದಲ ಹಂತ. ಅದೇ ರೀತಿ ಎರಡನೆ ಹಂತವನ್ನು ಎಲ್ಲಿ ಮಾಡಬೇಕು ? ಎರಡನೆ ಹಂತವನ್ನು ಮಾಡುವಾಗ ಹಿಂದೆ ಬಲವಂತರಾಯ್ ರವರ ಸಮಿತಿಯವರ ಅನುಭವದ ಪ್ರಕಾರ ಬ್ಲಾಕುಗಳು ಅಂತ ನಾವು ಈಗಾಗಲೇ ಮಾಡಿದ್ದೇವೆ. ಇವತ್ತು ಗ್ರಾಮಗಳಲ್ಲಿ ನಿಜವಾಗಿಯೂ ಅಭಿವೃದ್ಧಿ ಪ್ರಕ್ರಿಯೆಗಳು ಸಮುದಾಯ ದೃಷ್ಟಿಯಿಂದ ಯೋಜನೆಗಳನ್ನು ಮಾಡಬೇಕು. ಅಂದರೆ ಅಲ್ಲಿಗೆ ರಸ್ತೆಗಳು ಬೇಕು ಬಾವಿಗಳು ಬೇಕು, ಮನೆಗಳು ಬೇಕು, ಈ ರೀತಿಯ ಸಮುದಾಯ ಅಭಿವೃದ್ಧಿಯ ಕೆಲಸಕಾರ್ಯಗಳು ಆಗಬೇಕಾಗಿದೆ. ಆದರೆ ಇವತ್ತು ವ್ಯಕ್ತಿಪರವಾದ ಯೋಜನೆಗಳನ್ನು ನಾವು ಜಾರಿಗೆ ತಂದಿದ್ದೇವೆ. ಅವುಗಳಲ್ಲಿ ಕೆಲವು ಯಾವುವೆಂದರೆ, ಐ ಆರ್ ಡಿ. ಪಿ ಯೋಜನೆ, ಅಂತ್ಯೋದಯ ಯೋಜನೆಗಳು ಏನು ಇವೆ ಇವುಗಳನ್ನು ವ್ಯಕ್ತಿಯ ಪರವಾಗಿ ಜಾರಿಗೆ ತರಲಾಗಿದೆ. ಇದೇ ರೀತಿಯಲ್ಲಿ ಸಮುದಾಯ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾಗಿದ್ದರೆ ಬಹುಶಕ್ತಿಶಾಲಿಯಾಗಿ ಆಗಬೇಕಾಗಿದ್ದರೆ ಅದು ಒಂದು ಜಿಲ್ಲೆಯ ಘಟಕ ಮತ್ತು ತಾಲ್ಲೂಕು ಘಟಕ. ಈ ಮಧ್ಯಂತರ ವ್ಯವಸ್ಥೆಯ ಅವಶ್ಯಕತೆ ನಂತರ ಇಲ್ಲದಂತೆ ಮಾಡಬಹುದು, ಸಾಮೂಹಿಕ ಕಾರ್ಯಕ್ರಮದ ಮುಖಾಂತರ ಮಾಡಬೇಕು ಎಂಬುದು ಮಂಡಲ್ ಪಂಚಾಯಿತಿಯ ಸಿದ್ಧಾಂತ. ಮಂಡಲ್ ಪಂಚಾಯಿತಿಯನ್ನು 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿಯ ಘಟಕವಾಗಬೇಕು ಅಂತ ಮಾಡಿದ್ದೇವೆ. ಒಂದು ಗ್ರಾಮದ ಸಾಮೂಹಿಕ ಕಾರ್ಯಕ್ರಮ ಏನಿದೆ, ಮೈಕ್ರೋ ಲೆವಲ್ ರೀತಿಯ ಪ್ರಕ್ರಿಯೆ ಆಗಬೇಕಾದರೆ, ಉತ್ಪಾದನಾ ಘಟಕ ನಿರ್ಮಾಣವಾಗಬೇಕು. ವೈಜ್ಞಾನಿಕವಾಗಿ

ಚಿಂತನೆ 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಕೊನೆ ಪಕ್ಷ 1 ಲಕ್ಷ ರೂಪಾಯಿ ಆದಾಯವುಳ್ಳ ಒಂದು ವ್ಯವಸ್ಥೆ, ನಮ್ಮ ಒಂದು ಅನುಭವದಿಂದ ಇದು ಸಿದ್ಧವಾಗಿದೆ. ಈ ದೇಶದಲ್ಲಿ ಅನೇಕ ಪಂಚಾಯಿತಿಗಳು ಅವುಗಳ ಕಾರ್ಯವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗಿಲ್ಲ. ನಿಜವಾಗಿಯೂ ತನ್ನ ಕಾರ್ಯಕ್ರಮವನ್ನು ಮಾಡುವುದಕ್ಕೆ ಅವುಗಳಿಂದ ಸಾಧ್ಯವಾಗಿಲ್ಲ. ಮುನಿಸಿಪಲ್ ಕನ್‌ವೆನ್ಸನಲ್ ಅದನ್ನು ಮಾಡುವುದಕ್ಕೆ ಸಾಧ್ಯವಾಗಿದೆ. ರಸ್ತೆಯನ್ನು ಮೈನ್‌ಟೈನ್ ಮಾಡುವುದು, ಧರ್ಮಶಾಲೆಗಳು ಹಾಗೂ ಛತ್ರಗಳನ್ನು ನೋಡಿಕೊಳ್ಳುವಷ್ಟೇ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿದೆ. ಆದರೆ ಪಂಚಾಯಿತಿಯವರು ಅವರ ಮುನಿಸಿಫಲ್ ಡ್ಯೂಟೀಸ್ ಅನ್ನು ಮಾಡುವುದಕ್ಕಾಗಿಲ್ಲ. ಪೌರ ಸೌಕರ್ಯಗಳಾದ ಚರಂಡಿ ವ್ಯವಸ್ಥೆಯನ್ನು ಮಾಡುವುದಕ್ಕಾಗಿಲ್ಲ. ಗ್ರಾಮದಲ್ಲಿ ನೈರ್ಮಲ್ಯವನ್ನು ಕಾಪಾಡತಕ್ಕ ಕೆಲಸವನ್ನು ಮಾಡುವುದಕ್ಕಾಗಿಲ್ಲ. ಇದು ನಮ್ಮ ಅನುಭವ. ಆದರೆ ಈ ಕೆಲಸವನ್ನು ಕೇರಳದಲ್ಲಿ ಚೆನ್ನಾಗಿ ಮಾಡಿದ್ದಾರೆ ಏಕೆಂದರೆ ಕೇರಳದಲ್ಲಿ ಒಂದೇ ಹಂತದ ವ್ಯವಸ್ಥೆ ಇದೆ ಅಲ್ಲಿರತಕ್ಕಂತಹ ಒಟ್ಟು ಪಂಚಾಯಿತಿಗಳ ಸಂಖ್ಯೆ 9 ಸಾವಿರ 900 ರಿಂದ 1000 ಸಾವಿರ ಜನಸಂಖ್ಯೆಗೆ ಒಂದು ಪಂಚಾಯಿತಿಯಂತೆ ಮಾಡಿದ್ದಾರೆ. ಈ ಪಂಚಾಯಿತಿಯ ಆದಾಯ ಒಂದು ಲಕ್ಷರೂಪಾಯಿಗಳೆಂದು ಮಾಡಿದ್ದಾರೆ. ಅಲ್ಲಿ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ ಇದನ್ನು ಬಿಟ್ಟರೆ ಬೇರೆ ಯಾವ ರಾಜ್ಯದಲ್ಲೂ ಪಂಚಾಯಿತಿ ವ್ಯವಸ್ಥೆ ಇಲ್ಲ ಕರ್ನಾಟಕಕ್ಕೆ ಬಂದರೆ, ನಮ್ಮ ರಾಜ್ಯದಲ್ಲಿ 8391 ಪಂಚಾತಿಗಳು. ಇದರಲ್ಲಿ ಒಂದೇ ಗ್ರಾಮದ ಪಂಚಾಯಿತಿಗಳು ಏಕ ಗ್ರಾಮದ ಪಂಚಾಯಿತಿಗಳು ಅಂದರೆ 1500 ರಿಂದ 10,000 ಜನಸಂಖ್ಯೆ ಇರತಕ್ಕಂತಹ ಏಕ ಗ್ರಾಮ ಪಂಚಾಯಿತಿಗಳು 4934 ಇವೆ ಗ್ರೂಪ್ ಪಂಚಾಯಿತಿಗಳು ಗ್ರಾಮಗಳು ಇವನ್ನೆಲ್ಲಾ ಸೇರಿಸಿ ಲೆಕ್ಕಹಾಕಿರತಕ್ಕಂತಹದ್ದು ಅಂದರೆ ಅನೇಕ ಗ್ರಾಮಗಳು ಸೇರಿ ಒಂದು ಪಂಚಾಯಿತಿಯಾಗಿರತಕ್ಕಂತದ್ದನ್ನು ಸೇರಿಸಿ ಲೆಕ್ಕ ಹಾಕಿದಾಗ ಬಂದಂತಹ ಪಂಚಾಯಿತಿಗಳು 3336. 5 ಸಾವಿರ ಜನಸಂಖ್ಯೆಯಿಂದ 12 ಸಾವಿರ ಜನಸಂಖ್ಯೆ ಒಳಗಡೆ ಇರತಕ್ಕಂತಹ ಟೌನ್ ಪಂಚಾಯಿತಿಗಳು 121 ಹೀಗೆ ಒಟ್ಟು 8391 ಗ್ರಾಮ ಪಂಚಾಯಿತಿಗಳು ನಮ್ಮ ಕರ್ನಾಟಕದಲ್ಲಿವೆ; ಸರಾಸರಿಯಾಗಿ ಇವತ್ತು 3.5 ಪಂಚಾಯಿತಿಗಳಿಗೆ ಒಂದು ಮಂಡಲ್ ಪಂಚಾಯಿತಿ ಮಾಡಬೇಕೆಂದು ಇದ್ದೇವೆ. ಅದರಂತೆ ಈಗ ಇರತಕ್ಕ ವ್ಯವಸ್ಥೆಯಲ್ಲಿ 43.10 ಗ್ರಾಮ ಪಂಚಾಯಿತಿಗಳು ಇರತಕ್ಕಂತಹದ್ದಕ್ಕೆ ಒಂದು ತಾಲ್ಲೂಕು ಬೋರ್ಡ ಅಂತ ಇದೆ.

ಒಬ್ಬ ಮಾನ್ಯ ಸದಸ್ಯರು.—ಪಂಚಾಯಿತಿ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಳ್ಳಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಂತರ ಅದಕ್ಕೆ ಬರುತ್ತೇನೆ. ಇದರ ಹಣದ ವ್ಯವಸ್ಥೆ ಸುಮಾರು 3 ರಿಂದ 4 ಸಾವಿರ ರೂಪಾಯಿಗಳು ಇವುಗಳ ಉತ್ಪಾದನೆ.

ಡಾ|| ವಿ. ಎಸ್. ಆಚಾರ್ಯ—5 ಪಂಚಾಯಿತಿಗಳಿಗೆ ಒಂದೊಂದು ಮಂಡಲ್ ಪಂಚಾಯಿತಿ ಬರುತ್ತವೆ. 3.5 ಪಂಚಾಯಿತಿಗಳಿಗೆ ಒಂದು ಎಂಬುದಾಗಿ ಏನು ಹೇಳಿದ್ದೀರಿ ಅದು ಸರಿಯಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಲ್ಲ ನಾನು ಹೇಳಿದು ಸರಿಯಾಗಿದೆ. 26 ಸಾವಿರ ಹಳ್ಳಿಗಳು ರಾಜ್ಯದಲ್ಲಿವೆ. 8391 ಪಂಚಾಯಿತಿಗಳು ಇದ್ದಾವೆ ಎಂದು ಹೇಳಿದ ಮೇಲೆ, ಲೆಕ್ಕ ಹಾಕಿ ನೋಡಿದಾಗ 3.5 ಬರುತ್ತದೆ. ಈಗ ನಿರ್ಮಾಣ ಮಾಡತಕ್ಕ ಮಂಡಲ್ ಪಂಚಾಯಿತಿಗಳನ್ನು ಜಂಟಿ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ 10 ಸಾವಿರದಿಂದ 11 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ತಿದ್ದುಪಡಿಯನ್ನು ಮತ್ತೆ ನಾನು ತರಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿ ಇದಕ್ಕೆ ತೊಂದರೆ ಬರುತ್ತದೆ. ಆದ್ದರಿಂದ 10 ಸಾವಿರಕ್ಕೆ ಮಿತಿಯನ್ನು ಹಾಕಬೇಕೆಂದು ಹೇಳುತ್ತಿದ್ದೇನೆ ಅದಕ್ಕಿಂತ ಮೇಲೆ ಮಾಡಬಹುದು. ಕಡಿಮೆ ಮಾಡುವುದಕ್ಕಾಗುವುದಿಲ್ಲ. ಲೆಕ್ಕ ಹಾಕಿ ನೋಡುವುದಾದರೆ 26 ಸಾವಿರ ಹಳ್ಳಿಗಳಲ್ಲಿರತಕ್ಕ ಜನಸಂಖ್ಯೆ 2 ಕೋಟಿ 60 ಲಕ್ಷ. ಪಟ್ಟಣದ ಜನಸಂಖ್ಯೆಯನ್ನು ಬಿಟ್ಟು ಗ್ರಾಮದ ಜನರೇ 2 ಕೋಟಿ 60 ಲಕ್ಷ ಇದ್ದಾರೆ ಇದರಲ್ಲಿ ಮಲೆನಾಡು ಪ್ರದೇಶ, ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿರತಕ್ಕ ರಿಯಾಯಿತಿಯನ್ನು ವಿಚಾರ ಮಾಡುವುದಾದರೆ, ಸುಮಾರು 3 ಸಾವಿರ ಮಂಡಲ್‌ಪಂಚಾಯಿತಿಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯತೆ ಇದೆ ಈ ಮಂಡಲ್ ಪಂಚಾಯಿತಿಗಳು ಕೇವಲ ಕನ್‌ವೆನ್ಸನಲ್ ಅಥವಾ ಮುನಿಸಿಫಲ್ ಕಾರ್ಯ ಚಟುವಟಿಕೆಗಳನ್ನು ಮಾಡುವುದಕ್ಕೆ ಬದಲಾಗಿ ಹೊಸದಾಗಿ ಒಂದು ಸ್ವರೂಪದ ಡೆವಲಪ್‌ಮೆಂಟಲ್ ಪೂರ್ಣವಾಗಿ ಅಭಿವೃದ್ಧಿ ಶೀಲ ಶಕ್ತಿಯಾಗಿರಬೇಕು ನಾನು ಮೊದಲೇ ಹೇಳಿದೆ ಹಾಗೆ ಯಾವ ಹಂತದಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದರೆ ಮೊದಲು ಜಿಲ್ಲಾ ಹಂತ. ಜಿಲ್ಲಾ ಹಂತದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಬೇಕೋ ಅವುಗಳನ್ನು ಜಿಲ್ಲಾ ಹಂತದಲ್ಲಿ ಮಾಡಬೇಕು. ಕೆಲವು ವ್ಯವಹಾರಿಕವಾಗಿ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಲ್ಲ ಯೋಜನೆಗಳನ್ನು ತಾಂತ್ರಿಕವಾಗಿ ನೈಪುಣ್ಯವುಳ್ಳ, ಜಿಲ್ಲಾ ಮಟ್ಟದಲ್ಲಿರತಕ್ಕ ಆಡಳಿತದ ನೈಪುಣ್ಯವುಳ್ಳ, ಜಿಲ್ಲಾ ಮಟ್ಟದಲ್ಲಿರತಕ್ಕ ಸಂಪನ್ಮೂಲಗಳು—ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತು ಮೊದಲ ಹಂತ. ಅಲ್ಲಿ ವಿಕೇಂದ್ರೀಕರಣ, ಜನತಂತ್ರ ವಿಕೇಂದ್ರೀಕರಣ ಮಾಡುವುದಕ್ಕೆ ಅಪೇಕ್ಷೆಪಟ್ಟಿದ್ದೇವೆ. ಅದರ ವಿವರಗಳನ್ನು ಆಮೇಲೆ ಹೇಳುತ್ತೇನೆ. ಸಮಿತಿಯ ವರದಿಯನ್ನು ತೆಗೆದುಕೊಳ್ಳುವಾಗ ಹೇಳುತ್ತೇನೆ.

12-noon,

ಎರಡನೇ ಹಂತದಲ್ಲಿ ಆ ಒಂದು ಹಂತಕ್ಕೆ ಒಂದು ಪೂರಕ ಹಂತಬೇಕು. ಪೂರ್ಣವಾಗಿ ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ನಿರ್ಮಾಣಮಾಡಿ, ನೀತಿರೂಪಣೆ ಮಾಡಿ ಅವುಗಳನ್ನು ಕಾರ್ಯಗತಗೊಳಿಸತಕ್ಕಂಥ ಒಂದು ಜನಶಕ್ತಿ, ಅದರಲ್ಲಿ ಜನತೆ ನೇರವಾಗಿ ಪಾತ್ರವಹಿಸುವಂತೆ ಸಮರ್ಥವಾದಂಥ ಒಂದು ಘಟಕವನ್ನು ಮಾಡಬೇಕು ಎಂಬ ಉದ್ದೇಶದಿಂದ ನಮ್ಮ ಅನೇಕ ಅನುಭವಗಳಿಂದ, ಅನೇಕ ಸಮಿತಿಗಳ ಅಭಿಪ್ರಾಯಗಳಿಂದ, ಅಶೋಕಮೆಹ್ತ ವರದಿ ಪ್ರಕಾರ ಇಡೀ ದೇಶದಾದ್ಯಂತ ಇರತಕ್ಕ ಎಲ್ಲಾ ಚಿಂತನೆಗಳನ್ನು ಆಧಾರವಾಗಿಟ್ಟುಕೊಂಡು ಮಂಡಲ್ ಪಂಚಾಯಿತಿಗಳನ್ನು ಮಾಡಿದ್ದೇವೆ ಇದು ಜಿಲ್ಲಾ ಪರಿಷತ್ತಿನ ಎಲ್ಲಾ ಕಾರ್ಯಕ್ರಮಗಳನ್ನು ಜಾರಿಗೊಳಿಸತಕ್ಕಂಥ ಪೂರ್ಣವಾದ ಅಧಿಕಾರವುಳ್ಳ ಒಂದು ಗ್ರಾಮೀಣ ಘಟಕ. ಇವತ್ತಿನ ಪರಿಸ್ಥಿತಿ ಪ್ರಕಾರ ಈ ಒಂದು ಘಟಕಕ್ಕೆ ನೇರವಾಗಿ ಸರ್ಕಾರದಿಂದ ಸಿಗತಕ್ಕ ಹಣ 27½ ಸಾವಿರ ರೂಪಾಯಿ, ಮತ್ತೆ ಅವರು ಟ್ಯಾಕ್ಸ್ ಹಾಕುವುದರಿಂದ 12 ಸಾವಿರ ರೂಪಾಯಿ ಹುಟ್ಟುವಳಿ ಬರುತ್ತದೆ ಒಟ್ಟು 50 ಸಾವಿರ ರೂಪಾಯಿ ಸ್ವಂತ ಹಣ ಆಗುತ್ತದೆ. ಇಂತಹ ಒಂದು ಸ್ವಂತ ಹಣದ ವ್ಯವಸ್ಥೆ ಇದಕ್ಕೆ ಇದೆ, ಜೊತೆಗೆ ನಮ್ಮ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಸಾಮೂಹಿಕ ಅಭಿವೃದ್ಧಿಗಳು, ವ್ಯಕ್ತಿಪರ ಅಭಿವೃದ್ಧಿ ಕಾರ್ಯಗಳು, ದಲಿತರಿಗೆ ಸಂಬಂಧಪಟ್ಟ ಸಾಮಾಜಿಕ ಹಿನ್ನೆಲೆಗೆ ಸಂಬಧಪಟ್ಟ ಎಲ್ಲಾ ಕಾರ್ಯಕ್ರಮಗಳನ್ನು ಚುನಾಯಿತ ಸಂಸ್ಥೆಗಳು ಮಾಡುವುದಕ್ಕೆ ಅವುಗಳಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿರುತ್ತೇವೆ. ಆದರೆ ಅವುಗಳ ಮೇಲೆ ಆಡಳಿತ ಸಿಬ್ಬಂದಿಯ ಹೊರೆ ಮಾತ್ರ ಹೊರಿಸಲಿಕ್ಕೆ ಸಿದ್ಧವಿಲ್ಲ. ಏಕೆಂದರೆ, ಸಿಬ್ಬಂದಿ ಇದೆಲ್ಲಾವನ್ನು ತಿಂದು ಹಾಕುವುದರಿಂದ ಈ ಸಂಸ್ಥೆಗಳು ಅಭಿವೃದ್ಧಿಶೀಲ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಈ ಒಂದು ವ್ಯವಸ್ಥೆಯನ್ನು ಶಾಸನದಲ್ಲಿ ಅಳವಡಿಸಿದ್ದೇವೆ. ನಮ್ಮಲ್ಲಿ ಒಂದು ಪೂರ್ಣವಾದ ಉದ್ದೇಶವಿತ್ತು. ಏನೆಂದರೆ ಚಿಕ್ಕ ಗ್ರಾಮಗಳು ಇರಬೇಕು, 5 ಸಾವಿರ 3 ಸಾವಿರ ಇರಬೇಕು ಎಂದು ಇತ್ತು, ಇರಬಾರದು ಎಂದು ಇಲ್ಲ ಗ್ರಾಮ ಒಂದೇ ಘಟಕ ಆಗಬೇಕು, ಗ್ರಾಮ ಸಮೃದ್ಧವಾಗಿ ಆಗಬೇಕು ಎಂಬ ಉದ್ದೇಶವಿತ್ತು. ಇವತ್ತಿನ ಪರಿಸ್ಥಿತಿಯಲ್ಲಿ ಸಣ್ಣ ಗ್ರಾಮಗಳನ್ನು ಅಭಿವೃದ್ಧಿ ದೃಷ್ಟಿಯಿಂದ ಸಣ್ಣ ಘಟಕಗಳನ್ನಾಗಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಯೋಜನೆ ಮಾಡಿದರೂ ಕೂಡ ನೇರವಾಗಿ ಪೂರಕವಾದ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಗ್ರಾಮಸಭೆಯ ಮುಖಾಂತರ ಮಾಡಲು ಇಟ್ಟುಕೊಂಡಿದ್ದೇವೆ. ಆ ಒಂದು ದೃಷ್ಟಿಯಿಂದ ಗ್ರಾಮಸಭೆಯನ್ನು ಮಾಡಿದ್ದೇವೆ. ಗ್ರಾಮಸಭೆ ಅಂದರೆ ಇಡೀ ಗ್ರಾಮದಲ್ಲಿ ಒಟರ್ ಲಿಸ್ಟ್‌ನಲ್ಲಿರತಕ್ಕವರೆಲ್ಲರೂ, ಭಾಗವಹಿಸತಕ್ಕ ವ್ಯವಸ್ಥೆ ಇದೆ. ಈ ಗ್ರಾಮಸಭೆ ಚುನಾಯಿತ ಸದಸ್ಯರು, ಆಡಳಿತ ವರ್ಗದವರು ಗ್ರಾಮಪಂಚಾಯಿತಿಗೆ ಸಂಬಂಧಪಟ್ಟಂತೆ ಮಂಡಲ್ ಪಂಚಾಯಿತಿ ಕೈಗೊಂಡ ಪ್ರಗತಿಯನ್ನು ವಿಮರ್ಶೆಮಾಡತಕ್ಕಂಥಾದ್ದು, ಅದು ಆ ಗ್ರಾಮಕ್ಕೆ ಸಂಬಧಪಟ್ಟ ಯೋಜನೆಗಳ ಬಗ್ಗೆ ಚರ್ಚೆ ಮಾಡತಕ್ಕಂಥಾದು. ಆ ಗ್ರಾಮಕ್ಕೆ ಸಂಬಂಧಪಟ್ಟಹಾಗೆ ಚರ್ಚೆ, ವಿಮರ್ಶೆ ಮಾಡಿ ಸಲಹಾ ರೂಪದಲ್ಲಿ ಕೊಡುವುದಕ್ಕೆ ಈ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡಿದೆ. ನನ್ನ ದೃಷ್ಟಿಯಲ್ಲಿ ಒಂದು ಮಹತ್ವಪೂರ್ಣವಾದ ಜನಜಾಗೃತಿಗೆ' ಜನತೆಯ ಸಂಘಟನೆಗೆ ಸಾಂಘಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಕ್ರಿಯೆಗೆ ಈ ಒಂದು ಘಟಕ ಆದರ್ಶವಾಗಿದೆ. ಇದು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೋ ನಾವು ಕಾದು ನೋಡಬೇಕು. ಆದರೆ ನಮ್ಮ ಈ ಘಟಕ ಪ್ರೈಮರಿ ಯೂನಿಟ್, ಪ್ರಾಥಮಿಕ ಘಟಕ. ಇದನ್ನು ಏಕ ಸಲಹಾ ರೂಪದಲ್ಲಿ ಇಟ್ಟಿದ್ದೀರಿ ಅಂದರೆ, ಆಡಳಿತಾತ್ಮಕವಾಗಿ, ಮತ್ತು ವ್ಯಾವಹಾರಿಕವಾಗಿ ತೊಂದರೆಗಳು ಬರುವುದರಿಂದ ಸಲಹಾ ರೂಪದ ಒಂದು ವ್ಯವಸ್ಥೆಯನ್ನು ಈ ಘಟಕಕ್ಕೆ ಕೊಟ್ಟಿದ್ದೇವೆ. ಮತ್ತೆ ಮಧ್ಯಂತರ ವ್ಯವಸ್ಥೆ ಕೊಡಬೇಕು. ತಾಲ್ಲೂಕು ನಮ್ಮ ಘಟಕವಾಗಿದೆ. ತಮಗೆ ಗೊತ್ತಿರುವ ಹಾಗೆ ಕೇಂದ್ರದಿಂದ ಅನೇಕ ರೀತಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಸಹಾಯ ಬರುತ್ತದೆ, ತಮಗೆ ಗೊತ್ತಿರುವಹಾಗೆ ಎರಡು ರಾಜ್ಯಗಳಲ್ಲಿ ತಾಲ್ಲೂಕುಗಳನ್ನು ಆಡಳಿತದ ಘಟಕಗಳನ್ನಾಗಿ ಇಟ್ಟುಕೊಂಡಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರ- ಈ ಎರಡನ್ನು ಆಡಳಿತದ ಘಟಕಗಳನ್ನಾಗಿ ಇಟ್ಟುಕೊಳ್ಳಲಾಗಿದೆ. ಆದರೆ ಕೇಂದ್ರದ ನೆರವು ಎಲ್ಲಾ ಬ್ಲಾಕುಗಳನ್ನು ಆಧರಿಸಿ ಕೊಡುತ್ತಿದ್ದಾರೆಯೇ ಹೊರತು ತಾಲ್ಲೂಕುಗಳನ್ನು ಆಧರಿಸಿ ಕೊಡುತ್ತಿಲ್ಲ. ಹಿಂದೆ ಬ್ಲಾಕ್ ಅಡ್ಮಿನಿಸ್ಟ್ರೇಷನ್ ಎಂದು ಇತ್ತು. ಇಲ್ಲಿ 300 ಬ್ಲಾಕ್ ಅಡ್ಮಿನಿಸ್ಟ್ರೇಷನ್ಸ್ ಇತ್ತು. ಆಮೇಲೆ 288 ಬ್ಲಾಕ್ಸ್ ಆಯಿತು, ನಂತರ 175ಕ್ಕೆ ಇಳಿದಿದೆ. ಇದರಿಂದಾಗಿ ಎರಡರಿಂದ ಎಂಟು

ಕೋಟಿ ರೂಪಾಯಿಗಳು ಸಹ ನಮಗೆ ಸಿಕ್ಕುವುದಿಲ್ಲ, ಎನ್. ಆರ್. ಇ. ಪಿ. ಯಲ್ಲಿ 8 ಕೋಟಿ ರೂಪಾಯಿ ನಮಗೆ ಸಿಕ್ಕುವುದಿಲ್ಲ. ಈ ಒಂದು ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಸಮನ್ವಯಗೊಳಿಸತಕ್ಕ ಒಂದು ಸಮಿತಿಬೇಕು. ಆ ಒಂದು ಸಮಿತಿಬೇಕು ಎನ್ನತಕ್ಕ ದೃಷ್ಟಿಯಿಂದ ಇದನ್ನು ಮಾಡಿದೆ ಈ ಮಸೂದೆಯ ಉದ್ದೇಶವನ್ನು ಸ್ಪಷ್ಟವಾಗಿ ಹೇಳುವುದಾದರೆ, ಮೊದಲನೇ ಹಂತದಲ್ಲಿ ಜಿಲ್ಲೆ, ಎರಡನೆ ಹಂತದಲ್ಲಿ ಗ್ರಾಮ ಸಮುದಾಯಗಳು ಮಂಡಲ ಪಂಚಾಯಿತಿಯಾಗಿ, ಗ್ರಾಮ ಒಂದು ಮೂಲ ಘಟಕವಾಗಿ ಇರಬೇಕು ಎನ್ನುವುದು. ಇವು ಒಂದಕ್ಕೊಂದಕ್ಕೆ ಪೂರಕವಾಗಿದೆ. ಇದನ್ನು ಉಳಿಸಿಕೊಂಡರೆ ಪರಿವರ್ತನ ಕಾಲದಲ್ಲಿ ಮಧ್ಯಂತರ ವ್ಯವಸ್ಥೆ ಬೇಕು. ಇದನ್ನು ಚುನಾಯಿತವಲ್ಲದ ವ್ಯವಸ್ಥೆಯನ್ನಾಗಿ ಇಟ್ಟುಕೊಂಡಿದ್ದೇವೆ. ಒಂದು ವಾದ ಏನಿದೆ ಎಂದರೆ, ಎಲ್ಲಾ ಹಂತಗಳಲ್ಲೂ ಚುನಾಯಿತ ವ್ಯವಸ್ಥೆ ಇರಬೇಕೇಂಬುದು ಯಾವ ರಾಜ್ಯದಲ್ಲೂ ಮೂರು ಹಂತದಲ್ಲೂ ಚುನಾಯಿತ ವ್ಯವಸ್ಥೆ ಇಲ್ಲ. ಒಂದೆರಡು ರಾಜ್ಯಗಳಲ್ಲಿ ಚುನಾಯಿತ ವ್ಯವಸ್ಥೆ ಪೈಮರಿ ಹಂತದಲ್ಲಿದ್ದರೆ, ಕೆಲವು ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ತಿನ ಹಂತದಲ್ಲಿ ಮಾತ್ರ ಇವೆ, ಇನ್ನು ಕೆಲವು ರಾಜ್ಯಗಳಲ್ಲಿ ಪಂಚಾಯಿತಿಗಳಲ್ಲಿದ್ದರೆ ಇನ್ನು ಕೆಲವು ಕಡೆ ಮಧ್ಯಂತರ ವ್ಯವಸ್ಥೆಯಲ್ಲಿದೆ ಕೆಲವು ರಾಜ್ಯಗಳಲ್ಲಿ ಮಧ್ಯಂತರ ವ್ಯವಸ್ಥೆಯಲ್ಲಿ ಹೊರತುಪಡಿಸಿ ಪಂಚಾಯಿತಿ ಮತ್ತು ಜಿಲ್ಲಾ ವ್ಯವಸ್ಥೆಯಲ್ಲಿ ಪೂರ್ಣವಾದ ಚುನಾಯಿತ ವ್ಯವಸ್ಥೆ ಇದೆ ಆದರೆ ಇಲ್ಲಿ ಚುನಾಯಿತ ವ್ಯವಸ್ಥೆ ಮಾಡಿಲ್ಲ, ಮಂಡಲ್ ಪಂಚಾಯಿತಿಗೆ ಈ ವ್ಯವಸ್ಥೆ ಏಕೆ ಮಾಡಿದ್ದೇನೆ ಅಂದರೆ ಈ ಒಂದು ಮಧ್ಯಂತರ ವ್ಯವಸ್ಥೆ ಏನಿದೆ ಇದು ಒಂದು ಪರಿವರ್ತನ ಕಾಲದಲ್ಲಿ ಸಂಘಸಂಸ್ಥೆಗಳು ಫಲಪ್ರದವಾಗಿ ಬೇರೂರಿದಾಗ ಮಧ್ಯಂತರ ವ್ಯವಸ್ಥೆಯನ್ನು ತೆಗೆಯಲೇಬೇಕಾದ ಅವಶ್ಯಕತೆ ಕಾಣಬರುವುದಿಲ್ಲ. ಮೂಲಭೂತವಾದ ಉದ್ದೇಶಕ್ಕೆ ಇದು ಆಗುವುದಿಲ್ಲ ಈ ಒಂದು ದೃಷ್ಟಿಯಿಂದ ಸದನದ ಮುಂದೆ ಈ ಮಸೂದೆಯನ್ನು ತಂದಿದ್ದೇವೆ ಈ ಮಸೂದೆಯ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ವಿವರಿಸಿದ್ದೇನೆ, ಪೂರ್ಣ ವಿವರಕ್ಕೆ ಹೋಗದೆ ಇದರ ರಚನೆಯ ಬಗ್ಗೆ ಹೇಳುವುದಾದರೆ ಮೊಲಿ ವರದಿಯಲ್ಲಿ ಏನಿತ್ತು ಎನ್ನುವುದನ್ನು ಹೇಳುತ್ತೇನೆ ಒಂದು ವಿಷಯವನ್ನು ಹೇಳುವುದನ್ನು ಮರೆತೆ, ಇದರಲ್ಲಿ ನ್ಯಾಯಾಪಂಚಾಯಿತಿಯನ್ನೂ ಕೂಡ ಸೇರಿಸಿದ್ದೇವೆ ನ್ಯಾಯಪಂಚಾಯಿತಿಯ ಬಗ್ಗೆ ಅನೇಕರಿಗೆ ಅನೇಕ ರೀತಿಯ ಕಲ್ಪನೆ ಇದೆ. ಸತ್ಯವನ್ನು ಒಪ್ಪುವುದಾದರೆ ಬಹಳ ಕಡೆ ಪ್ರಾಯೋಗಿಕವಾಗಿ ಪೂರ್ಣ ರೀತಿಯ ಫಲಪ್ರದವನ್ನು ಪಡೆದಿಲ್ಲ, ಇದು ಅನೇಕ ಕಡೆಗಳಲ್ಲಿ ಫಲಪ್ರದವಾಗಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಹಾರಾಷ್ಟ್ರ ಮತ್ತು ಇನ್ನೂ ಅನೇಕ ರಾಜ್ಯಗಳಿಗೆ ನೀವು ಹೋಗಿ ನೋಡಿದ್ದರಲ್ಲಿ ಯಾವ ರಾಜ್ಯದಲ್ಲಿ ಇದು ಅನುಷ್ಠಾನಕ್ಕೆ ಬಂದಿದೆ ? ಮತ್ತು ಎಷ್ಟು ಎಫೆಕ್ಟೀವಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ರಾಜಾಸ್ಥಾನದಲ್ಲಿ ಮಾತ್ರ ಅನುಷ್ಠಾನಕ್ಕೆ ಬಂದಿದೆ. ಮಹಾರಾಷ್ಟ್ರದಲ್ಲಿ ಕೆಲವು ಭಾಗಗಳನ್ನು ತೆಗೆದು ಹಾಕಿದರು. ಎಲ್ಲಾ ರಾಜ್ಯಗಳಲ್ಲಿ ಸಾಮಾನ್ಯವಾಗಿ ಫಲಪ್ರದವಾಗಿಲ್ಲ. ಕೆಲವು ಕಡೆ ಜಾರಿಗೆ ಕೊಟ್ಟು ಕೆಲವು ಭಾಗಗಳಲ್ಲಿ ತೆಗೆದುಹಾಕಿದ್ದಾರೆ. ಅಸ್ಸಾಂನಲ್ಲಿ ಚೆನ್ನಾಗಿ ನಡೆಯುತ್ತಿದೆ, ಎನ್ನತಕ್ಕ ವರದಿಗಳು ಬಂದಿವೆ, ನಾವು ನೋಡಿಲ್ಲ. ಕೆಲವು ಕಡೆ ಭಿನ್ನಾಭಿಪ್ರಾಯವಿದೆ, ಕೆಲವು ಕಡೆ ಚೆನ್ನಾಗಿವೆ ಎಂಬ ಅಭಿಪ್ರಾಯ ಪಡುತ್ತಾರೆ. ನಾವು ಇಲ್ಲಿ ನ್ಯಾಯಪಂಚಾಯಿತಿಗೆ ಕೊಟ್ಟಿರತಕ್ಕ ವ್ಯವಸ್ಥೆಯನ್ನು ತಾವು ನೋಡಬಹುದು. ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಲ್ಲ ಗ್ರಾಮೀಣ ಭಾಗದಲ್ಲಿ ಸಾಧಾರಣವಾಗಿ ದಲಿತರ ಮೇಲೆ ಆಗತಕ್ಕಂಥ ಹಿಂಸೆ, ಅತ್ಯಾಚಾರಗಳು ಏನಿವೆ ಅವುಗಳ ಬಗ್ಗೆ ಗಮನ ಹರಿಸಿದೇವೆ. ಸಿವಿಲ್ ಸೂಟ್ ಹಾಕುವ ಬಗ್ಗೆ ಹೇಳಿದೆ. ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡು ಕೊಡದೇ ಹೋದರೆ ಕೋರ್ಟಿಗೆ ಹೋಗುತ್ತಾರೆ. ಕೋರ್ಟಿಗೆ ಯಾರು ಹೋಗುತ್ತಾರೆ ಕೊಟ್ಟವನು ಹೋಗುತ್ತಾನೆ, ತೆಗೆದುಕೊಂಡವನ್ನು ಕೋರ್ಟಿಗೆ ಹೋಗುವುದಿಲ್ಲ. ಕೋರ್ಟಿನಲ್ಲಿ ಕೊಟ್ಟಿರುವುದು ನಿಜವೇ ಎಂಬು ಪರಿಶೀಲನೆಮಾಡಿ, ಅದಕ್ಕೆ ಟೈಂಬೇಕು ಎಂದು ಕೇಳಿ ಅದನ್ನು ಒದಗಿಸುವುದಕ್ಕೆ ಕೋರ್ಟಿನಲ್ಲಿ ಅವಕಾಶವುಂಟು. ಇದನ್ನೆಲ್ಲಾ ಕೇಳಬೇಕಾದರೆ ಒಬ್ಬ ಲಾಯರನ್ನು ಇಟ್ಟು ಮಾಡಬೇಕಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ಸಾವಿರ ಅಲ್ಲ, 500 ರೂಪಾಯಿಗಳನ್ನು ಕೊಡುತ್ತಾ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ಕಡೆ ನಿಂತಿರಬೇಕು, ಬಹಳ ಕಡೆ ನಿಂತಿಲ್ಲ ಅಂಥಾವರಿಗೆ ಈ ಗ್ರಾಮೀಣ ವ್ಯವಸ್ಥೆಯಲ್ಲಿ ನ್ಯಾಯ ಸಿಗಬೇಕು ಎಂದು ಮಾಡಿದ್ದೇವೆ. ಏನಾದರೂ ಕದ್ದು, ಬಿದ್ದ ನನ್ನ ಮನೆಗೆ ಬಂದ ಎಂಬ ಚಿಕ್ಕಪುಟ್ಟ ಕೆಲಸಗಳಿಗೆ ಪೋಲೀಸ್ ಠಾಣೆಗೆ ಎಳೆದುಕೊಂಡು ಹೋಗಿ ನಾಲ್ಕು ಬಿಗಿಯುತ್ತಾರೆ. ಅಂಥ ಪ್ರಕರಣಗಳನ್ನು ಹಳ್ಳಿಯ ಸಮುದಾಯದ ಮುಂದೆ, ಚುನಾಯಿತ ಪ್ರತಿನಿಧಿಗಳ ಮುಂದೆ ತಂದು ತೀರ್ಮಾನವಾಗತಕ್ಕಂಥ ಗ್ರಾಮೀಣ ಜನತೆಯಲ್ಲಿ ಒಗ್ಗಟ್ಟನ್ನು ಮಾಡಿಸುವಂಥ ವ್ಯವಸ್ಥೆ ಇದೆ. ಗ್ರಾಮ

ಗಳ ಮಟ್ಟದಲ್ಲಿ ಬರತಕ್ಕ ಸಿವಿಲ್ ಹಾಗೂ ಕ್ರಿಮಿನಲ್ ಅಪರಾಧಗಳು ಈ ಅಪರಾಧಗಳನ್ನು ಯಾರು ಮಾಡಿರುತ್ತಾರೊ' ಅಂತಹ ಅಪರಾಧಿಗಳನ್ನು ಗ್ರಾಮ ಸಭೆಯ ಮುಂದೆ, ಜನರ ಮುಂದೆ ತೀರ್ಮಾನ ಮಾಡಬೇಕು. ಅನ್ಯಾಯವಾದವರಿಗೆ ನ್ಯಾಯವನ್ನು ದೊರಕಿಸಿ ಕೊಡಬೇಕು. ಸಾಧ್ಯವಾದರೆ ಇಬ್ಬರನ್ನೂ ಒಂದು ಗೂಡಿಸಬೇಕು ರಾಜಿ ಮಾಡಿಸಬೇಕು. ರಾಜಿ ಮಾಡಿಸುವುದಕ್ಕೂ ಇದರಲ್ಲಿ ಅವಕಾಶ ಇದೆ. ಗ್ರಾಮ ಸಮುದಾಯ ಜೀವನವನ್ನು ಅರ್ಥಮಾಡಿಕೊಂಡು ಅಲ್ಲಿ ಆಗತಕ್ಕ ಆಗಾಗ ಸಣ್ಣಪುಟ್ಟ ತೊಂದರೆಗಳನ್ನು, ಸಣ್ಣಪುಟ್ಟ ಕೇಸುಗಳಿಂದ ಆಗತಕ್ಕಂತಹ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ಸಾಧಾರಣವಾಗಿ, ದಲಿತರಿಗೆ, ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರುವಂತಹ ಜನರಿಗೆ ಗ್ರಾಮ ಮಟ್ಟದಲ್ಲೇ ನ್ಯಾಯಾ ದೊರೆಯಲ್ಲಿ ಎನ್ನುವ ಸದುದ್ದೇಶದಿಂದ ಈ ಒಂದು ಶಾಸನವನ್ನೂ ಕೂಡ ಈ ಕಾಯಿದೆಯಲ್ಲಿ ಅಳವಡಿಸಿದ್ದೇವೆ.

ಇನ್ನು ಜಿಲ್ಲಾ ಪರಿಷತ್ತಿನ ರಚನೆಯ ಬಗ್ಗೆ ಹೇಳುವುದಾದರೆ, ಸುಮಾರು 50 ಸಾವಿರ ಜನರಿಗೆ ಒಬ್ಬರಂತೆ ಸದಸ್ಯರನ್ನು ನೇರವಾಗಿ ಚುನಾಯಿಸತಕ್ಕಂತಹ ಅವಕಾಶವನ್ನು ಇದರಲ್ಲಿ ಮಾಡಿದ್ದೇವೆ. ಆದರೆ ಜಂಟಿ ಸಲಹಾ ಸಮಿತಿಯಲ್ಲಿ ಈ ಬಗ್ಗೆ ಚರ್ಚೆಯಾಗಿ ಹೆಚ್ಚು ಜನರಿಗೆ ಪ್ರಾತಿನಿಧ್ಯವನ್ನು ಕೊಡುವ ಸಲುವಾಗಿ 35 ಸಾವಿರ ಜನರಿಗೆ ಒಬ್ಬರು ಸದಸ್ಯರನ್ನು ಚುನಾಯಿಸುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ನೇರ ಚುನಾವಣೆ ನೇರ ಚುನಾವಣೆಯಲ್ಲಿ ಆರಿಸಿ ಬರತಕ್ಕಂತಹ ಸದಸ್ಯರ ಜೊತೆಗೆ ಬೇರೆ ಸದಸ್ಯರೂ ಇರುತ್ತಾರೆ. ಆ ಜಿಲ್ಲೆಯ ಶಾಸಕರು ಇರುತ್ತಾರೆ. ಮತ್ತೆ ಆ ಜಿಲ್ಲೆಯ ಲೋಕಸಭಾ ಸದಸ್ಯರೂ ಸದಸ್ಯರಾಗಿ ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿರತಕ್ಕ ಸಹಕಾರಿ ಸಂಘಗಳು ಅಂದರೆ ಡಿ. ಸಿ. ಸಿ. ಬ್ಯಾಂಕ್ ಹಾಗೂ ಮಾರ್ಕೆಟಿಂಗ್ ಫೆಡರೇಷನ್ ಅಂತ ಏನುಇದೆ ಅವುಗಳ ಪ್ರತಿನಿಧಿಗಳು ಇದರಲ್ಲಿ ಸದಸ್ಯರಾಗಿರುತ್ತಾರೆ. ಮತ್ತೆ ಇದರಲ್ಲಿ ಮೀಸಲಾತಿಯನ್ನೂ ಕೂಡ ಅನುಸರಿಸಬೇಕಾಗಿದೆ. ಅದಕ್ಕೆ ತಿದ್ದುಪಡಿಯನ್ನು ನಾನು ತರಬೇಕಾಗಿದೆ. ಅದನ್ನು ಕ್ಲಾಸ್-ಬೈ-ಕ್ಲಾಸ್ ತೆಗೆದುಕೊಳ್ಳುವಾಗ ಆ ಬಗ್ಗೆ ತಿದ್ದುಪಡಿಯನ್ನು ನಾನು ತರಬೇಕೆಂದಿದ್ದೇನೆ. ಈಗ ಇರತಕ್ಕಂತಹ ಮಸೂದೆಯ ಪ್ರಕಾರ 35 ಸಾವಿರ ಜನಸಂಖ್ಯೆಗೆ ಒಬ್ಬರು ಸದಸ್ಯರು ಏನು ನೇರವಾಗಿ ಚುನಾಯಿತರಾಗುತ್ತಾರೆ, ಅವರ ಪೈಕಿ ಶೇಕಡ 20 ರಷ್ಟು ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ಮಾಡಿದ್ದೇವೆ. ಮತ್ತೆ ಹರಿಜನ-ಗಿರಿಜನರ ಪರವಾಗಿ ಅವರ ಜನಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಇರಬೇಕೆಂಬ ವ್ಯವಸ್ಥೆಯನ್ನೂ ಇದರಲ್ಲಿ ಕಾಣಿಸಿದ್ದೇವೆ. ಮತ್ತೆ ಇದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ನೇರವಾಗಿ ಚುನಾಯಿತರಾಗಿ ಬಂದಿರತಕ್ಕಂತಹ ಸದಸ್ಯರಿಂದ ಆರಿಸಬೇಕೆಂದು ಮಾಡಿದ್ದೇವೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಶಾಸನ ಸಭಾ ಸದಸ್ಯರಾಗಲೀ ಅಥವಾ ಇನ್ನಿತರೆ ಸದಸ್ಯರಾಗಲೀ ನಿಲ್ಲಕೂಡದು ಅಂತ ಮಾಡಿದ್ದೇವೆ. ಇದಕ್ಕೆ ಮೂಲ ಕಾರಣವೇನೆಂದರೆ, ಆರ್ಥಿಕವಾಗಿ ವಿಚಾರ ಮಾಡಬೇಕಾಗುತ್ತದೆ ಯಾವುದೇ ರೀತಿಯ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿಲ್ಲ. ಅಂದರೆ ಟ್ಯಾಕ್ಸ್ ಹಾಕತಕ್ಕ ಅಧಿಕಾರವನ್ನು ಇದಕ್ಕೆ ಕೊಟ್ಟಿಲ್ಲ. ಬೇರೆ ಕಡೆಯಿಂದ ಅಭಿವೃದ್ಧಿಯಾಗಬೇಕು. ನಮ್ಮ ಯೋಜನೆಯಲ್ಲಿ ರಾಜ್ಯದಿಂದ ಹಾಕುವಂತಹ ಟ್ಯಾಕ್ಸ್ ಹಾಗೂ ರಾಷ್ಟ್ರೀಯ ಟ್ಯಾಕ್ಸ್ ಈ ಎಲ್ಲಾ ರೀತಿಯ ಟ್ಯಾಕ್ಸ್‌ಗಳೂ ಹಳ್ಳಿಯಿಂದಲೇ ಹರಿದು ಹೋಗತಕ್ಕಂತಹದ್ದು. ಆ ದೃಷ್ಟಿಯಿಂದ ತೆರಿಗೆಯ ಮೂಲಗಳಿಗೆ ಹೆಚ್ಚು ಭಾರವಾಗಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ಜಿಲ್ಲೆಗೆ ಸಂಬಂಧಪಟ್ಟಂತೆ ಬೇರೆ ಬೇರೆ ಇಲಾಖೆಗಳು ಈಗಾಗಲೇ ಏನೇನು ಅಭಿವೃದ್ಧಿ ಯೋಜನೆಗಳನ್ನು ಮಾಡುತ್ತಿವೆ, ಅವುಗಳನ್ನು ಪೂರ್ತಿ, ಹಣದ ಸಮೇತ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಬೇಕು ಒಂದು ಉದಾಹರಣೆಯನ್ನು ಹೇಳುವುದಾದರೆ, ತೋಟಗಾರಿಕೆ ಇಲಾಖೆಯಿಂದ ಒಂದು ಅಭಿವೃದ್ಧಿ ಯೋಜನೆಯನ್ನು ಆ ಜಿಲ್ಲೆಯಲ್ಲಿ ಮಾಡುತ್ತಿದ್ದಾರೆಂದು ಇಟ್ಟುಕೊಳ್ಳೋಣ. ಆ ಕೆಲಸವನ್ನು ಜಿಲ್ಲಾ ಪರಿಷತ್ತೇ ಮಾಡಬೇಕಾಗಿ ಬಂದಾಗ ಆ ಯೋಜನೆಯ ಒಟ್ಟು ಅಂದಾಜು ವೆಚ್ಚದ ಜೊತೆಗೆ ತಾಂತ್ರಿಕ ಸಿಬ್ಬಂದಿಯನ್ನೂ ಕೂಡ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಬೇಕೆಂದು ಮಾಡಿದ್ದೇವೆ. ಇದು ಒಂದು ಅಧಿಕಾರ ನಾವು ಅವರಿಗೆ ಕೊಟ್ಟಿರತಕ್ಕಂತಹದ್ದು. ಪೂರ್ಣ ಸಂಪನ್ಮೂಲವನ್ನು ಅಭಿವೃದ್ಧಿ ದೃಷ್ಟಿಯಿಂದ ಮಾಡಬೇಕೆಂದಾಗ ರಾಜ್ಯದ ಬೊಕ್ಕಸದಿಂದ ಈಗಾಗಲೇ ಏನೇನು ಖರ್ಚು ಮಾಡುತ್ತಿದ್ದೇವೆ, ಆ ಹಣವನ್ನೇ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿ, ಅಲ್ಲಿಯೇ ಜಿಲ್ಲೆಗೆ ಯೋಗ್ಯವಾದ ಅಭಿವೃದ್ಧಿ ಯೋಜನೆಗಳನ್ನು ತಯಾರು ಮಾಡಿ ಅದರ ಒಂದು ಟೆಕ್ನಿಕಲ್ ಕಾಂಪಿಟೆನ್ಸಿ ಜಿಲ್ಲಾ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಯಾವ ರೀತಿ ಇದೆ, ಅದೇ ರೀತಿ ಜಿಲ್ಲಾ ಮಟ್ಟದಲ್ಲೂ ಇರಬೇಕೆಂದು ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ತಯಾರು ಮಾಡಿದಂತಹ ಯೋಜನೆಯ ಉಸ್ತುವಾರಿ ಮಾಡತಕ್ಕಂತಹದ್ದು, ಮತ್ತು ಅದನ್ನು ಜಾಗೃತಗೊಳಿಸತಕ್ಕಂತಹ ಪೂರ್ಣ ಅಧಿಕಾರವನ್ನು ಇದಕ್ಕೆ ಕೊಡಬೇಕು. ಆ ಹಂತದಲ್ಲಿ ಆಗಬೇಕಾಗಿರುವ ಅಭಿವೃದ್ಧಿ

ಕಾರ್ಯಗಳಲ್ಲಿ ಶಾಲಾ ಕಟ್ಟಡಗಳು, ಆಸ್ಪತ್ರೆಗಳು, ಹಳ್ಳಿಗಾಡಿನ ನೀರು ಸರಬರಾಜು, ಹಳ್ಳಿಗಾಡಿನ ರಸ್ತೆ ವ್ಯವಸ್ಥೆ, ಈ ರೀತಿಯ ಎಲ್ಲ ಸೌಲಭ್ಯಗಳನ್ನು ಈ ಹಂತದಲ್ಲೇ ಮಾಡಬೇಕೆಂದು ಅವರಿಗೆ ಅಧಿಕಾರವನ್ನು ಕೊಡಬೇಕೆಂದು ಮಾಡಿದ್ದೇವೆ. ಇದರ ಜೊತೆಗೆ ಮತ್ತೊಂದು ವ್ಯವಸ್ಥೆ ಏನಿದೆ ಎಂದರೆ, ಕೈಗಾರಿಕೆಯನ್ನು ಮಾಡುವುದಾದರೆ, ಯಾವನಾದರೂ ತಾನೇ ಸ್ವಂತ ಕೈಗಾರಿಕೆಯನ್ನು ಸ್ವತಂತ್ರವಾಗಿ ಮಾಡುತ್ತೇನೆಂದು ಮುಂದು ಬಂದರೆ, ಅವರಿಗೆ ಆರ್ಥಿಕವಾಗಿ ಸಹಾಯವನ್ನು ಮಾಡತಕ್ಕಂತಹ ಘಟಕದ ನಿರ್ಮಾಣ ಮಾಡುವಂತಹ ಅಧಿಕಾರವನ್ನು ಇವರಿಗೆ ಕೊಡಬೇಕೆಂದು ಮಾಡಿದ್ದೇವೆ. ಎರಡನೇ ಹಂತದ ಬಗ್ಗೆ ಹೇಳುವುದಾದರೆ ; ನಾನು ಮೊದಲೇ ಹೇಳಿದ ಹಾಗೆ ಮಧ್ಯಂತರ ವ್ಯವಸ್ಥೆ ಎಂದರೆ, ಜಿಲ್ಲಾ ಪರಿಷತ್ತಿಗೂ ತಾಲ್ಲೂಕಿಗೂ ಇರತಕ್ಕಂತಹದ್ದು ತಾಲ್ಲೂಕು ಸಮಿತಿ ಈ ತಾಲ್ಲೂಕಿನ ಸಮಿತಿಯ ವ್ಯವಸ್ಥೆ ಯಾವ ರೀತಿ ಇದೆ ಎಂದರೆ, ಜಿಲ್ಲಾ ಪರಿಷತ್ತಿನ ಸದಸ್ಯರಾಗಿ ಆ ತಾಲ್ಲೂಕಿನಿಂದ ಯಾರ್ಯಾರು ಆಯ್ಕೆಯಾಗಿರುತ್ತಾರೆ ಅವರೆಲ್ಲರೂ ಇದರಲ್ಲಿ ಸದಸ್ಯರಾಗಿರುತ್ತಾರೆ ಆ ತಾಲ್ಲೂಕಿನ ಶಾಸಕರು ಇದರಲ್ಲಿ ಸದಸ್ಯರಾಗಿರುತ್ತಾರೆ. ಮತ್ತೆ ಆ ತಾಲೂಕಿನ ಮಂಡಲ್ ಪಂಚಾಯಿತಿಯ ಅಧ್ಯಕ್ಷರು ಇದರ ಸದಸ್ಯರಾಗಿರುತ್ತಾರೆ ಆ ತಾಲ್ಲೂಕಿನ ಬಹುಪಾಲು ಕ್ಷೇತ್ರವನ್ನು ಪ್ರತಿನಿಧಿಸತಕ್ಕಂತಹ ಶಾಸಕರು ಆ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇಂತಹ ಈ ಒಂದು ಸಮಿತಿಗೆ ಹಿಂದುಳಿದ ವರ್ಗದವರಿಗೆ ಪೂರ್ತಿ ಅವಕಾಶಇಲ್ಲದಂತಾಗುತ್ತದೆ ಎನ್ನುವ ದೃಷ್ಟಿಯಿಂದ 5 ಜನರನು ಅಲ್ಲಿಗೆ ನಾಮಕರಣ ಮಾಡತಕ್ಕಂತ ಅಂದರೆ ಹಿಂದುಳಿದ ವರ್ಗದವರಿಗೆ ಹಾಗೂ ಹರಿಜನ-ಗಿರಿಜನರ ನಾಮಕರಣ ಮಾಡುವಂತಹ ಒಂದು ಅವಕಾಶವನ್ನು ಜಂಟಿ ಸಲಹಾ ಸಮಿತಿಯ ಸಲಹೆಯ ಪ್ರಕಾರ ಮಾಡಿದ್ದೇವೆ. ಇದರ ಕಾರ್ಯಕ್ಷೇತ್ರದ ಬಗ್ಗೆ ವಿಚಾರ ಮಾಡುವುದಾದರೆ, ತಾಲ್ಲೂಕಿನ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಉಸ್ತುವಾರಿ ಮಾಡತಕ್ಕಂತಹದ್ದು, ಅಲ್ಲಲ್ಲೇ ಆಗಾಗ ಮಂಡಲ್ ಪಂಚಾಯಿತಿಯ ಕಾರ್ಯವನ್ನು ವಿತರಣೆ ಮಾಡತಕ್ಕಂತಹದ್ದು, ಅವರಿಗೆ ಸಾಕಷ್ಟು ಮಾರ್ಗದರ್ಶನ ಕೊಡತಕ್ಕಂತಹದ್ದು. ಸೈದ್ಧಾಂತಿಕವಾಗಿ ಈ ಎರಡನೆ ಹಂತದ ವ್ಯವಸ್ಥೆಯನ್ನು ಮುಂದೆ ಈ ವ್ಯವಸ್ಥೆ ಭದ್ರವಾದ ಮೇಲೆ ಕಡಿಮೆ ಮಾಡಬೇಕೆಂಬ ಪ್ರಯತ್ನ ಇರುವುದರಿಂದ ಮಧ್ಯಂತರ ವ್ಯವಸ್ಥೆ ಅಷ್ಟೇನೂ ಪ್ರಬಲವಾದ ವ್ಯವಸ್ಥೆ ಏನೂ ಅಲ್ಲ. ಇದು ಉಸ್ತುವಾರಿಯ ವ್ಯವಸ್ಥೆ ಆ ದೃಷ್ಟಿಯಿಂದ ಸಧ್ಯಕ್ಕೆ ಈ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ಮಂಡಲ್ ಪಂಚಾಯಿತಿಯ ರಚನೆ ಬಗ್ಗೆ ಹೇಳುವುದಾದರೆ, 5000ರಿಂದ 1 ಸಾವಿರ ಜನಸಂಖ್ಯೆಗೆ ಒಬ್ಬರು ಚುನಾಯಿತ ಸದಸ್ಯರು ಇರಬೇಕೆಂಬ ವ್ಯವಸ್ಥೆಯನ್ನು ಮಾಡಿದೆವು ಆದರೆ ಹೆಚ್ಚು ಜನರಿಗೆ ಇದರಲ್ಲಿ ಅವಕಾಶವಾಗಲಿ ಎನ್ನುವ ಉದ್ದೇಶದಿಂದ 500 ಜನಸಂಖ್ಯೆಗೆ ಒಬ್ಬರು ಚುನಾಯಿತ ಸದಸ್ಯರಿರಬೇಕೆಂಬ ಈ ಒಂದು ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ. ಇದನ್ನು ಕಡಿಮೆ ಮಾಡುವುದಕ್ಕೆ ಕಾಯಿದೆಯಲ್ಲಿ ಅವಕಾಶವನ್ನು ಮಾಡಲಾಗಿದೆ. ಇದರಲ್ಲೂ ಮೀಸಲಾತಿ ಪದ್ಧತಿಯನ್ನು ಇಟ್ಟುಕೊಂಡಿದ್ದೇನೆ. ಮಹಿಳೆಯರಿಗೆ 20 ಪರ್ಸೆಂಟ್ ಹಾಗೂ ಹರಿಜನ-ಗಿರಿಜನರಿಗೆ ಅವರ ಸಂಖ್ಯಾಬಲಕ್ಕನುಸಾರವಾಗಿ ಇರಬೇಕೆಂದು ಕಾಯಿದೆಯಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಈ ಒಂದು ಮಂಡಲ್ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗದವರಿಗೆ ಯಾವುದೇ ರೀತಿಯ ಪ್ರಾತಿನಿಧ್ಯ ಇಲ್ಲದಿರುವ ಕಡೆ ಇಬ್ಬರನ್ನು ನಾಮಕರಣ ಮಾಡಬೇಕೆಂಬ ವ್ಯವಸ್ಥೆಯನ್ನು ಮಾಡಿದ್ದೇವೆ. ಇದರ ಜೊತೆಗೆ ಇವರಿಗೆ ಕೆಲವು ಅಧಿಕಾರನ್ನು ಕೂಡ ಕೊಟ್ಟಿದ್ದೇನೆ ಇದರ ಹಣಕಾಸಿನ ದೃಷ್ಟಿಯಿಂದ, ಸರ್ಕಾರ ಕೊಡತಕ್ಕ ವ್ಯವಸ್ಥೆಯ ಜೊತೆಗೆ ಎಲ್ಲಾ ಸಂಪನ್ಮೂಲಗಳೂ ಆಗತಕ್ಕಂತಹ ತೆರಿಗೆಯನ್ನು ಹಾಕುವಂತಹ ಅಧಿಕಾರವನ್ನು ಮಂಡಲ್ ಪಂಚಾಯಿತಿಗೆ ಕೊಟ್ಟಿದ್ದೇನೆ. ಅವರು ಮನೆಗಳ ಮೇಲೆ ಕಂದಾಯ ಹಾಕಬಹುದು. ಜಮೀನಿನ ಮೇಲೆ ಕಂದಾಯ ಹಾಕಬಹುದು ಇನ್ನು ಇತರೇ ತೆರಿಗೆಗಳು ಹಿಂದೆ ಏನು ಇತ್ತೋ ಆ ರೀತಿ ತೆರಿಗೆಯನ್ನು ಅಂದರೆ ತಾಲ್ಲೂಕು ಬೋರ್ಡ್ ಸೆಸ್ಸನ್ನು ಹಾಕತಕ್ಕಂತಹ ಅಧಿಕಾರ ಈ ಮಂಡಲ್ ಪಂಚಾಯಿಗೆ ಹೋಗಬೇಕು ಅಂತ ಮಾಡಿದ್ದೇನೆ. ಅದರ ಬಗ್ಗೆ ಮತ್ತೊಂದು ತಿದ್ದುಪಡಿಯನ್ನು ತರುವುದಕ್ಕೆ ಅಪೇಕ್ಷೆ ಪಟ್ಟಿದ್ದೇನೆ ಗ್ರಾಮದ ದೃಷ್ಟಿಯಿಂದ ಜಿಲ್ಲಾ ಪರಿಷತ್ತಿನ ಎಲ್ಲಾ ಅಧಿಕಾರವನ್ನು, ತನ್ನ ಎಲ್ಲಾ ಕಾರ್ಯ ಯೋಜನೆಗಳನ್ನು ಕಾರ್ಯಗತ ಮಾಡತಕ್ಕಂತಹ ಘಟಕ ಇದು. ಜಿಲ್ಲಾ ಪರಿಷತ್ತಿನ ಎಲ್ಲಾ ಕಾರ್ಯ ಯೋಜನೆಗಳನ್ನು ಸಾಧನೆ ಮಾಡತಕ್ಕ ಘಟಕಗಳು ಇದು ಆಗಬೇಕು. ತಾಂತ್ರಿಕವಾಗಿ ತೊಂದರೆಯಾದರೆ, ಅದಕ್ಕೆ ಬೇಕಾದಂತಹ ಸಂಪನ್ಮೂಲಗಳನ್ನು, ಅದಕ್ಕೆ ಬೇಕಾದ ಆಡಳಿತ ವ್ಯವಸ್ಥೆಯನ್ನು ಸಹಾಯವಾಗಿ ಕೊಡತಕ್ಕಂತಹದ್ದು ಜಿಲ್ಲಾ ಪರಿಷತ್ತಿನ ಕರ್ತವ್ಯ. ಇದರ ಜೊತೆಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ ಅವುಗಳೆಲ್ಲ ನೇರವಾಗಿ ಜಿಲ್ಲಾ ಪರಿಷತ್ತಿಗೂ ಅಲ್ಲಿಂದ ನೇರವಾಗಿ ಮಂಡಲ್ ಪಂಚಾಯಿತಿಗೂ ಕೆಲವು ಕಾರ್ಯಕ್ರಮಗಳನ್ನು ವಹಿಸಬೇಕು ಅಂದರೆ ಅಂತಹ ಕಾರ್ಯಕ್ರಮನ್ನೂ ಕೂಡ

ಇವುಗಳಿಗೆ ವಹಿಸುವಂತಹ ವ್ಯವಸ್ಥೆಯನ್ನು ಕಾಯಿದೆಯಲ್ಲಿ ಮಾಡಿದ್ದೇವೆ. ಇದರಲ್ಲಿ ವೃದ್ಧಾಪ್ಯ ವೇತನ ಇದು ಸಾಮಾಜಿಕವಾದ ಕಾರ್ಯಕ್ರಮ. ಸಮಾಜದ ಹಿತವನ್ನು ಕಾಯುವ ಕಾರ್ಯಕ್ರಮ. ಇಂತಹ ಕಾರ್ಯಕ್ರಮವನ್ನು ಸರ್ಕಾರ ನೇರವಾಗಿ ಮಂಡಲ್ ಪಂಚಾಯಿತಿಗೆ ವಹಿಸಬೇಕು. ಮಂಡಲ್ ಪಂಚಾಯಿತಿ ಈ ಕಾರ್ಯವನ್ನು ಮಾಡತಕ್ಕಂತಹ ಒಂದು ಅಧಿಕಾರವನ್ನು ಕೂಡ ಇವುಗಳಿಗೆ ಕೊಟ್ಟಿದ್ದೇವೆ. ಸದ್ಯದ ಹಂತದಲ್ಲಿ ಇವುಗಳ ಕಾರ್ಯ ವಿಧಾನವನ್ನು ಈ ರೀತಿ ಮಾಡಿದ್ದೇವೆ. ನ್ಯಾಯ ಪಂಚಾಯಿತಿಯ ಘಟಕ ಹೇಗೆಂದರೆ ಮಂಡಲ್ ಪಂಚಾಯಿತಿಯಲ್ಲಿ 20 ಜನ ಸದಸ್ಯರು ಏನಿರುತ್ತಾರೆ ಅವರೇ 5 ಜನ ಸದಸ್ಯರನ್ನು ಪಂಚಾಯಿತಿಗೆ ಚುನಾಯಿಸಬೇಕು. ಚುನಾವಣೆಗೆ ಯಾರು ಬೇಕಾದರೂ ನಿಂತುಕೊಳ್ಳಬಹುದು. ಸಿಂಗಲ್ ಟ್ರಾನ್ಸ್‌ಫರ್ ಓಟ್ ಪ್ರಕಾರ ಚುನಾವಣೆ ಆಗಬೇಕು. ಇದರಲ್ಲಿ 3 ಕಾಯ್ದಿಟ್ಟ ಜಾಗಗಳು ; ಅದರಲ್ಲಿ ಹಿಂದುಳಿದ ಜನಾಂಗಕ್ಕೆ ಒಂದು, ಮತ್ತು ಮಹಿಳೆಯರಿಗೆ ಒಂದು, ಮತ್ತೆ ಎರಡು ಸಾಮಾನ್ಯ ಸೀಟುಗಳು.

ಶ್ರೀ ಎಂ. ಎಸ್. ಕೃಷ್ಣನ್ – ಪ್ರೊಪೋರ್ಷನಲ್ ರೆಪ್ರೆಸಂಟೇಟೀವ್ ಅಂದರೆ ಏನು ?

ಶ್ರೀ ಅಬ್ದುಲ್ ನಜೀರ್ ಸಾಬ್. – ರಾಜ್ಯ ಸಭೆಗೆ ಓಟು ಮಾಡುವ ಹಾಗೆ. ನೂರು ಜನ ಇದ್ದರೆ ಒಬ್ಬರು ಆಯ್ಕೆ ಆಗಬಹುದು. ಆ ದೃಷ್ಟಿಯಿಂದ ಎಲ್ಲರೂ ಬರಲಿ ಎಂದು ಮಾಡಿದ್ದೇವೆ. ಹಿಂದಿನ ಶಾಸನದಲ್ಲಿ ಓದು ಬರಹ ಬಲ್ಲವನು ಇರಬೇಕೆಂದು ಇಡಲಾಗಿತ್ತು. ಇದು ಇದ್ದರೆ ಆಗುವುದಿಲ್ಲವೆಂದು ಅನುಭವ ಮುಖ್ಯ ಎಂದು ತಿದ್ದುಪಡಿ ತಂದಿದ್ದೇವೆ. ವಯಸ್ಸು ಮಾತ್ರ 40 ಇರಬೇಕೆಂದು ತೀರ್ಮಾನ ಮಾಡಿದ್ದೇವೆ. ನ್ಯಾಯ ಪಂಚಾಯಿತಿಯ ಬಗ್ಗೆ ಕೃಷ್ಣಯ್ಯರ್‌ರವರ ಸಮಿತಿಯವರು ಏನು ವರದಿ ಕೊಟ್ಟಿದ್ದಾರೆಂದರೆ ಪಂಚಾಯಿತಿಗಳು ನಿರ್ಮಾಣವಾದರೆ ಸಾಕು ಎಂದು. ನ್ಯಾಯ ತೀರ್ಮಾನ ಮಾಡುವುದಕ್ಕೆ ಕಾನೂನು ಪಂಡಿತನನ್ನು ಹಾಕಬೇಕೆಂದು ಇದ್ದುದನ್ನು ಚುನಾಯಿತ ಪ್ರತಿನಿಧಿಗಳು ಮಾಡಲಿ ಎಂದು ಮಾಡಿದ್ದೇವೆ. ಮತ್ತೊಂದು ಬದಲಾವಣೆ ಏನೆಂದರೆ ಯಾವ ನ್ಯಾಯ ಪಂಚಾಯಿತಿಗಳನ್ನು ಜಿಲ್ಲಾ ಪರಿಷತ್ತು ಅಪೇಕ್ಷೆಪಡುತ್ತದೋ ಅಂಥ ನ್ಯಾಯ ಪಂಚಾಯಿತಿಗಳನ್ನು ಜಿಲ್ಲಾ ಪರಿಷತ್ತಿನೊಳಗೆ ಹಾಕುವುದಕ್ಕೆ ಅವಕಾಶ ಇರಬೇಕೆಂದು ಜಂಟಿ ಸಲಹಾ ಸಮಿತಿ ವರದಿ ಕೊಟ್ಟಿದೆ. ಇಷ್ಟು ಇದರ ರಚನೆ ಮತ್ತು ಸ್ವರೂಪ.

ಇನ್ನೂ ಹೊಸ ಅನುಭವದಿಂದ ರಾಜಕೀಯದಿಂದ ಚದುರಂಗದಾಟಕ್ಕೆ ಸಿಲುಕಬಾರದೆಂದು ಹೊಸ ತಿರುವನ್ನು ಕೊಟ್ಟಿದ್ದೇವೆ. ಯಾವುದೇ ಮಂಡಲ್ ಪಂಚಾಯಿತಿಯನ್ನು ರದ್ದುಗೊಳಿಸುವುದಕ್ಕಾಗಲೀ ಅಥವಾ ಸರ್ಕಾರ ವಹಿಸಿಕೊಳ್ಳುವುದಕ್ಕಾಗಲಿ ಯಾವ ಅಧಿಕಾರಿಗಳಿಗೂ ಅಧಿಕಾರವನ್ನು ಕೊಟ್ಟಿಲ್ಲ. ಯಾವುದೇ ಕಾರಣದಿಂದ ಮಂಡಲ್ ಪಂಚಾಯಿತಿಯನ್ನು ರದ್ದುಗೊಳಿಸತಕ್ಕದ್ದು ಇಲ್ಲ. ಜಿಲ್ಲಾ ಪರಿಷತ್ತಿನ ಸರ್ವಾನುಮತದ ಬೆಂಬಲಕ್ಕೆ ಅವಕಾಶ ಕೊಟ್ಟಿದ್ದೇವೆ. ಮತ್ತೊಂದು ಹೊಸದು ಏನೆಂದರೆ ಯಾವುದೇ ಕಾರಣದಿಂದ ಈ ಕಾಯಿದೆಯಲ್ಲಿ ಪಂಚಾಯಿತಿ ಆಗಲಿ, ಜಿಲ್ಲಾ ಪರಿಷತ್ತಾಗಲೀ 6 ತಿಂಗಳವರೆಗೆ ಚುನಾವಣೆ ಇಲ್ಲದೆ ಇರುವ ಹಾಗೆ ಇಲ್ಲ. ಚುನಾವಣೆ ಆಗಲೇಬೇಕೆಂದು ಮಾಡಿದ್ದೇವೆ. ಇವತ್ತಿನ ದಿವಸ, ಇಡೀ ದೇಶದಲ್ಲಿ ಸ್ಥಳೀಯ ಸಂಸ್ಥೆಗಳು ಬದುಕಿರತಕ್ಕದ್ದು ದೇಶದ ಅನುದಾನದಿಂದ ; ಆಯಾಯ ರಾಜ್ಯ ಸರ್ಕಾರಗಳು ಕೊಡತಕ್ಕ ಅನುದಾನದಿಂದ. ಈ ಅನುದಾನ ಪದ್ಧತಿಯನ್ನು ತಪ್ಪಿಸಿ ನಿಜವಾದ ಹಕ್ಕನ್ನು ಕೊಡಬೇಕೆಂದು ಮಾಡಿದ್ದೇವೆ. ಅಲ್ಲದೆ, ತಲಾವಾರು 5 ರೂಪಾಯಿ ಕೊಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಅದಕ್ಕೆ ಸೂರ್ಯನಾರಾಯಣ ರಾವ್ ಅವರು 10 ರೂಪಾಯಿ ಇಡಬೇಕೆಂದು ಸೂಚಿಸಿದ್ದಾರೆ. 10 ರೂಪಾಯಿ ಕೊಡುವುದಾದರೆ ಸಂತೋಷ ; ಒಂದು ಪಕ್ಷ 25 ರೂಪಾಯಿಗಳನ್ನು ಕೊಡುವುದಾದರೂ ಸಂತೋಷ. ಇವತ್ತಿನ ದಿವಸ, ನಾವು ಸಂಪನ್ಮೂಲಗಳನ್ನು ನೋಡಿಕೊಂಡು ಮಾಡಬೇಕೆಂದು 5 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೇವೆ. ವರ್ಷೇ ವರ್ಷೇ ತೆರಿಗೆಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಸಂಪನ್ಮೂಲಗಳು ದೊರೆಯಬಹುದು. ಆ ರೀತಿ ಸಂಪನ್ಮೂಲಗಳಿಂದ ಬರತಕ್ಕ ಭಾಗವನ್ನು ಇವುಗಳಿಗೆ ಕೊಡತಕ್ಕ ನಿರ್ಧಾರವನ್ನು ಕೈಗೊಳ್ಳಲಿಕ್ಕೆ ಒಂದು ಆರ್ಥಿಕ ಆಯೋಗವನ್ನು ಅಂದರೆ 5 ವರ್ಷಗಳಿಗೊಮ್ಮೆ ಜಿಲ್ಲಾ ಪರಿಷತ್ತುಗಳು, ಸ್ಥಳೀಯ ಸಂಸ್ಥೆಗಳು ಕೊಡತಕ್ಕ ಹಣವನ್ನು ತೀರ್ಮಾನ ಮಾಡತಕ್ಕ ಆಯೋಗವನ್ನು ರಚಿಸಬೇಕೆಂಬ ಅಭಿಪ್ರಾಯವನ್ನು ಕೂಡ ಈ ಶಾಸನದಲ್ಲಿ ಸೇರಿಸಿದ್ದೇವೆ. ಇದರಲ್ಲಿ ಎಲ್ಲಾ ಉದ್ದೇಶ ಏನೆಂದರೆ, ರಾಜಕೀಯ ದೃಷ್ಟಿಯಿಂದ ಈ ಸಂಸ್ಥೆಗಳ ಮೇಲೆ ಯಾವುದೇ ರಾಜಕೀಯ ದೃಷ್ಟಿ ಬೀರಿ ಗದಾಪ್ರಹಾರ ಮಾಡಬಾರದು. ಅವು ಶಕ್ತಿಯುತವಾಗಿ ಬೆಳೆಯಬೇಕು. ಒಂದು ಹೊಸ ಮಾದರಿ ಆಗಬೇಕೆಂದು ಮಾಡಿದ್ದೇವೆ. ನನ್ನ ದೇಶದ ಆರ್ಥಿಕ ಸಂಪತ್ತಿನ ದೃಷ್ಟಿಯಲ್ಲಿ ಹೊಸ ತೀರ್ಮಾನ ಬರಬೇಕೆಂಬ ದೃಷ್ಟಿಯಿಂದ ನಾವು ಇಲ್ಲಿ ಅಳವಡಿಸಿದ್ದೇವೆ. ಮಾನ್ಯ ಸದಸ್ಯರು ಚರ್ಚೆಯ ಕಾಲದಲ್ಲಿ ವಿಚಾರಗಳನ್ನು ವ್ಯಕ್ತಪಡಿಸಿದಾಗ ಅದಕ್ಕೆ ಸಂಬಂಧಪಟ್ಟಂತೆ ಉತ್ತರಿಸುತ್ತೇನೆಂದು ಹೇಳಿ ಈ ಸಭೆ ಈ ಶಾಸನವನ್ನು ತುಂಬು ಹೃದಯದಿಂದ ಸ್ವಾಗತಿಸ

ಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಗ್ರಾಮೀಣ ಜೀವನದ ದೃಷ್ಟಿಕೋನವನ್ನು ಬದಲಾಯಿಸುವ ಶಾಸನ ಇಂಥ ಶಾಸನದಿಂದ ದೇಶಕ್ಕೆ ಮಾರ್ಗದರ್ಶನ ಆದೀತು ಎಂದು ನಂಬಿದ್ದೇನೆ ಏಕೆಂದರೆ ಈ ಶಾಸನವನ್ನು ಅನುಸರಿಸಿ ಆಂಧ್ರ ಪ್ರದೇಶದ ಸರ್ಕಾರ ಒಂದು ಕಾರ್ಯಕ್ರಮವನ್ನು ಕೈಗೊಂಡಿದೆ. ಮಂಡಲಗಳನ್ನು ರಚಿಸುವ ಸಲುವಾಗಿ ಒಂದು ಆರ್ಡಿನೆನ್ಸನ್ನು ತಂದಿದ್ದಾರೆ. ಆ ದೃಷ್ಟಿಯಿಂದ ಈ ಶಾಸನವನ್ನು ಸ್ವಾಗತಿಸಬೇಕು ಮಾನ್ಯ ಸದಸ್ಯರೆಲ್ಲರೂ ಬಿಚ್ಚು ಮನಸ್ಸಿನಿಂದ ತಮ್ಮ ತಮ್ಮ ಸಲಹೆಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ – ತಾವೇನೋ ತಿದ್ದುಪಡಿಗಳನ್ನು ತರುತ್ತೇವೆಂದು ಹೇಳಿದಿರಿ. ತಿದ್ದುಪಡಿಗಳನ್ನು ತರುವಾಗ, ಹರಿಜನ ಗಿರಿಜನರಿಗೆ : ಸರ್ಕಾರಿ ನೌಕರಿಯಲ್ಲಿ 18 ಪರ್ಸೆಂಟ್ ರಿಸರ್ವೇಷನ್ ಏನು ಇದೆ ಅದೇ ರೀತಿ ಮಂಡಲ್ ಪಂಚಾಯಿತಿಗಳಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ತರುತ್ತೀರಾ ?

ಶ್ರೀ ಅಬ್ದುಲ್‌ನಜೀರ್ ಸಾಬ್.– ಅದೂ ಬರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).––ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ನಾನು ಬಹಳ ದಿನಗಳಿಂದ ನಿರೀಕ್ಷೆ ಮಾಡುತ್ತಿದ್ದೆ, ಮಾನ್ಯ ನಜೀರ್ ಸಾಹೇಬರು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ ಅವರ ಭಾವನೆಗಳು ವಿಚಾರಗಳು ಒಳ್ಳೆಯವು. ಅವರೂ ನಾವು ಮೊದಲಿನಿಂದ ಒಂದೇ ವಲಯದಲ್ಲಿದ್ದವರು, ಒಂದೇ ಪಕ್ಷದಲ್ಲಿ ಕೆಲಸ ಮಾಡಿದವರು ಒಳ್ಳೆಯ ರೀತಿಯಿಂದ ಮತ್ತು ಪ್ರಾಮಾಣಿಕವಾಗಿ ಈ ಮಸೂದೆಯನ್ನು ತಂದಿದ್ದಾರೆ ಆದರೆ ವಿಷಾದದ ಒಂದು ಮಾತನ್ನು ಹೇಳಬೇಕಾಗಿದೆ. ಈ ಮಸೂದೆಯನ್ನು ತರುವಾಗ ಇವರ ಜೊತೆಯಲ್ಲಿ ಯಾರ್ಯಾರು ಕೆಲಸ ಮಾಡಿದರೋ ಗೊತ್ತಿಲ್ಲ. ಏಕೆಂದರೆ ಇದರಲ್ಲಿ ಬಹಳ ಡಿಫೆಕ್ಟ್ಸ್ ಇವೆ. ಇದನ್ನು ಮುದ್ರಣ ದೋಷ ಅನ್ನುವುದಕ್ಕಾಗುವುದಿಲ್ಲ, ಬಹುಶಃ ಇವರು ನಿರ್ಲಕ್ಷ್ಯ ಮನೋಭಾವದಿಂದ ಡ್ರಾಫ್ಟ್ ಮಾಡಿದ್ದಾರೆಂದು ಹೇಳಬಹುದು. ಜಂಟಿ ಸಲಹಾ ಸಮಿತಿಗೆ ಹೋದ ನಂತರ ಆ ಸಮಿತಿಯ ಸದಸ್ಯರು ಸಾಮಾನ್ಯವಾಗಿ ಏನು ತೀರ್ಮಾನ ಕೊಟ್ಟಿದ್ದಾರೆ ಆ ಮಾತುಗಳು ಇದರಲ್ಲಿ ಇಲ್ಲವೆಂದು ಹೇಳುತ್ತೇನೆ ಅದನ್ನು ಕೈಬಿಟ್ಟಿದ್ದೀರಿ ಈಗ ತಿದ್ದುಪಡಿಗಳು ಆಗಬಹುದು, ಆ ಮಾತು ಬೇರೆ. ಆದರೆ ಎಷ್ಟು ನಿರ್ಲಕ್ಷ್ಯ ಮಾಡಿದಿರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಈ ಹೌಸ್‌ನಿಂದ ಪವರ್ ಡೆಲಿಗೇಟ್ ಮಾಡಿದಾಗ ಜಂಟಿ ಸಲಹಾ ಸಮಿತಿಯ ನಿರ್ಣಯ ಅಥವಾ ತೀರ್ಮಾನ ಏನು ಬರುತ್ತದೆ ಅದು ಈ ಮನೆಯ ತೀರ್ಮಾನವಾಗುತ್ತದೆ. ಆ ರೀತಿ ತೀರ್ಮಾನಗಳನ್ನು ಮಾಡಿದ್ದರೂ ಅದನ್ನು ಇಲ್ಲಿ ತರದಿದ್ದರೆ ಅದಕ್ಕೆ ಏನು ಬೆಲೆ ಕೊಟ್ಟಂತಾಯಿತು ? ಪುಸ್ತಕದಲ್ಲಿ ತಾವು ಏನು ಕೊಟ್ಟಿದ್ದೀರೋ ಅದನ್ನು ಇಲ್ಲಿ ಬರೆದಿದ್ದಾರೆ. ಅಲ್ಲಿ ಯಾವ ನಿರ್ಣಯಗಳು ಆಗಿವೆಯೋ ಅವು ಇಲ್ಲಿ ಬಂದಿಲ್ಲ ; ಅವು ಬರಬೇಕಾಗಿತ್ತು ತಿದ್ದುಪಡಿಯಲ್ಲಿ ತರುವ ಮಾತು ಬೇರೆ. ಆದರೆ ಡ್ರಾಫ್ಟ್ ಮಾಡುವಾಗ ಲಕ್ಷ್ಯ ಕೊಟ್ಟಿಲ್ಲವೆಂದು ಹೇಳುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 37 ವರ್ಷಗಳಾದರೂ ಕೂಡ ನಮ್ಮ ನಮ್ಮ ಹಕ್ಕುಗಳ ಬಗ್ಗೆ ಇನ್ನೂ ನಾವು ಬಡಿದಾಡುತ್ತಿದ್ದೇವೆ, ಹರತಾಳ ಮಾಡುತ್ತಿದ್ದೇವೆ, ಆಜಿಟೇಷನ್ ಮಾಡುತ್ತಿದ್ದೇವೆ. ಇದಕ್ಕೆ ಕಾರಣ. ಸಂವಿಧಾನದಲ್ಲಿ ಅಸಮತೋಲನವನ್ನು ದೂರ ಮಾಡುತ್ತೇವೆಂದು ಹೇಳಿದ್ದಾರೆ ಅದನ್ನು ಮಾಡದೆ ಇರುವುದರಿಂದ ಜಾತಿ ಜಾತಿಯಲ್ಲಿ ವಿಷಮತೆ ಒಂದು ಭಾಗದಿಂದ ಇನ್ನೊಂದು ಭಾಗದಲ್ಲಿ ವಿಷಮತೆ, ಒಂದು ರಾಜ್ಯ ಮುಂದಿದ್ದು ಮತ್ತೊಂದು ರಾಜ್ಯ ಹಿಂದಿರುವುದನ್ನು ನೋಡುತ್ತಿದ್ದೇವೆ. ಒಂದು ರಾಜ್ಯದಲ್ಲಿ ಎಷ್ಟು ಭಾಗಗಳು, ವಿಭಾಗಗಳು ಇವೆ ಅವುಗಳಲ್ಲಿ ಕೆಲವು 37 ವರ್ಷಗಳಿಂದ ಹಿಂದುಳಿದಿದ್ದು ಮತ್ತೆ ಕೆಲವು ಮುಂದೆ ಹೋದುದನ್ನು ನೋಡುತ್ತಿದ್ದೇವೆ ಇದನ್ನು ಸರಿ ಮಾಡುತ್ತೇವೆಂದು ಯಾವುದೇ ಸರ್ಕಾರ ಬಂದಾಗ ಹೇಳಿದರೂ ಅದು ಮಾಡುವುದು ಮತ್ತೊಂದಾಗಿರುತ್ತದೆ. ನಾನು ಪಕ್ಷದ ವಿಚಾರ ಮಾತನಾಡಿದರೆ ಆ ಕಡೆ ಕುಳಿತವರು ಮಸೂದೆ ಮೇಲೆ ಪಕ್ಷದ ವಿಚಾರ ಮಾತನಾಡುತ್ತಿದ್ದಾರೆಂದು ಹೇಳಬಾರದು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮಂತ್ರಿಗಳು ಪಕ್ಷದ ಮಾತನ್ನು ಹೇಳಿದ್ದರಿಂದ ನಾನು ಹೇಳಬೇಕಾಗಿದೆ. ಪಾರ್ಟಿ ವಿಚಾರವನ್ನು ಹೊರಗೆ ಹೋದಮೇಲೆ ಮಾತಾಡೋಣ. ಇಲ್ಲಿ ಬಂದಾಗ ನಾಲ್ಕು ಕೋಟಿ ರಾಜ್ಯದ ಜನತೆ ಏನಿದ್ದಾರೆ ಅವರ ಬಗ್ಗೆ ಚಿಂತನೆ ಮಾಡೋಣ.

12–30 P. M.

ಶ್ರೀ ಅಬ್ದುಲ್ ನಜೀರ್ ಸಾಬ್.––ನನ್ನ ಮಾತನ್ನು ಅವರು ಅರ್ಥ ಮಾಡಿಕೊಳ್ಳಲಿಲ್ಲ. ನಿಮ್ಮ ಪಕ್ಷದವರು ಇದ್ದರು, ಅವರೂ ಕೂಡ ಸಕ್ರಿಯವಾಗಿ ಭಾಗವಹಿಸಿದ್ದರು ಎಂದು ಹೇಳಿದೆ. ಇವತ್ತು ನಮ್ಮ ಸಂವಿಧಾನದಲ್ಲಿ ಸಮಾಜವಾದ ಆಗಬೇಕು ಎಂದು ಹೇಳಿದೆ. ಅಂದರೆ ಎಲ್ಲರೂ ಸರಿಸಮಾನರಾಗಿ ಇರಬೇಕು

ಎಂಬುದು ಅದರ ಅರ್ಥ. ಏನಿಲ್ಲದಿದ್ದರೂ ಹೊಟ್ಟೆ ಬಟ್ಟೆಗೆ ಮತ್ತು ವಾಸಿಸುವುದಕ್ಕೆ ಮನೆಗೆ, ಶಿಕ್ಷಣಕ್ಕೆ ಸರಿಸಮಾನವಾದ ವ್ಯವಸ್ಥೆ ಇರಬೇಕು ಆದರೆ ಅದು ದೊರೆತಿಲ್ಲ ಕಾರಣ ನನ್ನ ವ್ಯವಸ್ಥೆ ಸರಿಯಾಗಿಲ್ಲ. ಅದಕ್ಕೆ ಸರಿಯಾದ ಹಣಕಾಸಿನ ವ್ಯವಸ್ಥೆ ಮಾಡಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಯಾವಾಗಲೂ ರಾಜ್ಯಕ್ಕೆ ಸ್ವಾಯತ್ತತೆ ಇರಬೇಕು, ಹೆಚ್ಚಿನ ಅಧಿಕಾರ ಬೇಕು, ಅಧಿಕಾರ ವಿಕೇಂದ್ರೀಕರಣ ಆಗಬೇಕು, ಎಲ್ಲನನ್ನೂ ಕೇಂದ್ರದವರು ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತಿರುತ್ತಾರೆ ಕೇಂದ್ರದಿಂದ ಹೆಚ್ಚು ಹಣ ಪಡೆಯುವುದಕ್ಕೆ, ಸ್ವಾಯತ್ತತೆಯನ್ನು ಪಡೆಯುವುದಕ್ಕೆ, ಅಧಿಕಾರ ಪಡೆಯುವ ಸಲುವಾಗಿ ನಿಮ್ಮ ಸಹಕಾರ ಬೇಕು ಎಂದು ಮುಖ್ಯ ಮಂತ್ರಿಗಳು ಹೇಳಿದರು. ಮುಖ್ಯ ಮಂತ್ರಿಗಳು ಹೇಳುವುದನ್ನು ನಾವು ಒಪ್ಪುತ್ತೇವೆ. ಸ್ವಾಯತ್ತತೆ ಪಡೆಯಲು ಹೆಚ್ಚು ಪಡೆಯಲು ನಮ್ಮ ಅಭ್ಯಂತರ ಇಲ್ಲ ಆದರೆ ಮೊದಲು ನೀವು ನಿಮ್ಮ ಮನೆಯನ್ನು ಸರಿಮಾಡಿಕೊಳ್ಳಿ ರಾಜ್ಯದಲ್ಲಿ ಯಾರು ಯಾರು ಹಿಂದುಳಿದಿದ್ದಾರೆ ಅದನ್ನು ಮೊದಲು ಸರಿಪಡಿಸಿ, ಅಸಮಾನತೆಯನ್ನು ದೂರ ಮಾಡಿ ನಂತರ ನೀವು ನಿಮ್ಮ ಬೇಡಿಕೆಯನ್ನು ಹೇಳಿ, ನಾವು ನಿಮ್ಮ ಜೊತೆಯಲ್ಲಿರುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಆದರೂ ಈ ಬಿಲ್‌ನ್ನು ಸ್ವಾಗತ ಮಾಡುತ್ತೇನೆ. ಆದರೆ ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ಏನು ಹೊರಟಿದ್ದೀರಿ ಇದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳು ವಿಕೇಂದ್ರೀಕರಣ ಎಂದರೆ ಅಧಿಕಾರ ವಿಕೇಂದ್ರೀಕರಣ ಮಾತ್ರ ಎಂಬ ದೃಷ್ಟಿಯಿಂದ ಹೇಳಿಲ್ಲ, ಎಲ್ಲ ವಿಷಯವನ್ನೂ ಸೇರಿಸಿ ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮುಂದೆ ತಾಲ್ಲೂಕ್ ಬೋರ್ಡ್, ಗ್ರಾಮ ಪಂಚಾಯಿತಿ ಅಥವಾ ಮಂಡಲ್ ಪಂಚಾಯತಿ ಆದರೂ ಬರತಕ್ಕ ಆದಾಯವನ್ನು ಎಲ್ಲ ಕಡೆಗೂ ಸರಿಸಮನಾಗಿ ಹಂಚುವುದು ಸರಿಯಲ್ಲ ಯಾವ ಭಾಗ ಹಿಂದುಳಿದಿದೆ, ಯಾವ ಜಿಲ್ಲೆ ಹಿಂದುಳಿದಿದೆ ಎಂಬುದನ್ನು ನೋಡಿ ಅದನ್ನು ಮುಂದೆ ತರು ವುದಕ್ಕೆ ಆದಾಯವನ್ನು ಹಂಚಬೇಕು ತಾವು ಏನು ಆರ್ಥಿಕ ಆಯೋಗ ಮಾಡಬೇಕೆಂದಿದ್ದೀರಿ ಅದರ ಪ್ರಕಾರ ಯಾವ ಜಿಲ್ಲೆ ಅಥವಾ ತಾಲ್ಲೂಕು ಹಿಂದುಳಿದಿದೆಯೋ ಅಲ್ಲಿಗೆ ಹೆಚ್ಚು ಸಂಪನ್ಮೂಲವನ್ನು ಕೊಡ ಬೇಕೆಂಬ ಮಾತು ಈ ಬಿಲ್ಲಿನಲ್ಲಿ ಇರಬೇಕಾಗಿತ್ತು ಇದರ ಬಗ್ಗೆ ನಾವು ತಿದ್ದುಪಡಿ ತರುತ್ತಿದ್ದೇವೆ ನನ್ನ ಅನುಭವದಲ್ಲಿ...

ಉಪಾಧ್ಯಕ್ಷರು.--ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರಾ ?

ಶ್ರೀ ಬಿ. ಎ. ಜೀವಿಜಯ.--ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಮಲ್ಲಾರಗೌಡ ಪಾಟೀಲ್ -- ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ ಗಳು ಸಭೆಯಲ್ಲಿರಬೇಕೆಂಬುದು ನಮ್ಮ ಅಪೇಕ್ಷೆ

ಶ್ರೀ ಬಿ. ಎ. ಜೀವಿಜಯ -- ಅವರು ಭಾಷಣ ಮಾಡುತ್ತಿದ್ದಾರೆ. ಆದರೆ ಬರೆದುಕೊಳ್ಳುವಂಥ ವಿಚಾರ ಹೇಳುತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.--ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ಲನ್ನು ಹಿಂದೆ ಯಾವ ಪ್ರಕಾರ ತಾಲ್ಲೂಕ್ ಬೋರ್ಡ್, ಪಂಚಾಯಿತಿ ಮತ್ತು ಡಿ. ಡಿ. ಸಿ. ಗಳಿತ್ತು ಅದಕ್ಕೆ ಬದಲಾಗಿ ಬೇರೆ ರೀತಿಯ ವ್ಯವಸ್ಥೆ ಮಾಡುವುದಕ್ಕೆ ತಂದಿದ್ದಾರೆ. ಜಿಲ್ಲಾ ಪರಿಷತ್ತಿನ ಬಗ್ಗೆ ಮಾತ್ರ ನಾನು ಸ್ವಾಗತ ಮಾಡುತ್ತೇನೆ. ಈ ಬಿಲ್‌ನಲ್ಲಿ ಸೆಕ್ಷನ್ 135ರಿಂದ 137ರವರೆ ಮೂರು ಸೆಕ್ಷನ್‌ಗಳನ್ನು ಇಟ್ಟಿದ್ದಾರೆ. ಇದು ಮಂತ್ರಿಗಳಿಗೆ ಇಚ್ಛೆ ಇಲ್ಲದಿದ್ದರೂ ಬೇರೆಯವರ ಒತ್ತಾಯದಿಂದ ಈ ಭಾಗವನ್ನು ಸೇರಿಸಿದ್ದಾರೆ. ಮಾನ್ಯ ಮಂತ್ರಿಗಳು ಮಾತನಾಡುವಾಗ ಹೇಳಿದರು ನನಗೆ ಇಚ್ಛೆ ಇಲ್ಲದಿದ್ದರೂ ಬಹುಮತ ಆ ಕಡೆ ಇದ್ದುದರಿಂದ ಹಾಕಿದ್ದೇನೆ ಎಂದು ದೇಶದಲ್ಲಿ ಕೇಂದ್ರ, ಅದರ ಕೆಳಗೆ ರಾಜ್ಯ. ರಾಜ್ಯದಲ್ಲಿ ಜಿಲ್ಲೆ' ತಾಲ್ಲೂಕು ಮತ್ತು ಗ್ರಾಮ. ಈ ಪ್ರಕಾರ ಐದು ಹಂತಗಳಿವೆ ಈಗ 10 ಸಾವಿರಕ್ಕೆ ಒಂದರ ಮಂಡಲ್ ಪಂಚಾಯಿತಿ ಇರಬೇಕು ಎಂದು ಮಾಡಿದ್ದಾರೆ. ಇದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ 26 ಸಾವಿರ ಹಳ್ಳಿಗಳಲ್ಲಿ 8,300 ಗ್ರಾಮ ಪಂಚಾಯತಿಗಳೇನಿವೆ ಇದಕ್ಕೆ 20-25 ವರ್ಷಗಳಿಂದ ಯಾವ ರೀತಿ ಹಣ ಕೊಟ್ಟಿದೆ. ಸಂಪನ್ಮೂಲ ಒದಗಿ ಸಿದ್ದಾರೆ ಎಂಬುದನ್ನು ನೋಡಿದರೆ ಸರಿಯಾಗಿ ವಿತರಣೆಯಾಗಿಲ್ಲವೆಂಬುದು ಕಂಡು ಬರುತ್ತದೆ ನನ್ನ ಅನು ಭವದಲ್ಲಿ ಹೇಳುವುದಾದರೆ ನಾಲ್ಕು ಹಳ್ಳಿಗಳನ್ನು ಸೇರಿಸಿ ಒಂದು ಗ್ರೂಪ್ ಪಂಚಾಯಿತಿ ಮಾಡಿದರೆ ಹೆಡ್‌ಕ್ವಾರ್ಟರ್ ಏನಿದೆ ಅಲ್ಲಿ ಮಾತ್ರ ಹಣವನ್ನು ತೆಗೆದುಕೊಂಡು ಉಳಿದ ಹಳ್ಳಿಗಳಿಗೆ ಕೊಡದಿರುವುದನ್ನು ನೋಡುತ್ತಿದ್ದೇನೆ. ಒಂದು ಪೈಸೆ ಕೂಡ ಬೇರೆ ಹಳ್ಳಿಗೆ ಕೊಟ್ಟಿಲ್ಲ ನನ್ನ ಭಾಗದ ಅನುಭವನ್ನು ನಾನು ಹೇಳು ತ್ತಿದ್ದೇನೆ. ಆದರೆ ಇದೇ ರೀತಿ ಬೇರೆ ಕಡೆಗಳಲ್ಲೂ ಆಗಿರಬಹುದು. ಈ ದೃಷ್ಟಿಯಿಂದ 10 ಸಾವಿರ 11 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಮಾಡಿ ಅಲ್ಲಿ ಹಣ ಇಟ್ಟರೆ ಪ್ರತಿಯೊಂದು ಪಂಚಾಯಿ ತಿಗೂ ಹಣ ಸರಿಯಾಗಿ ಹಂಚಿಕೆಯಾಗದೆ ಹೆಡ್‌ಕ್ವಾರ್ಟರ್ಸ್‌ನಲ್ಲಿ ಮಾತ್ರ ಖರ್ಚಾಗುವ ಸಂಭವ ಇರುವುದ

ರಿಂದ ಇದು ವ್ಯಾವಹಾರಿಕವಾಗಿ ಸರಿಹೋಗುವುದಿಲ್ಲ ಎಂದು ಹೇಳುತ್ತಿದ್ದೇನೆ. ಈಗ ಏನು ಪಂಚಾಯಿತಿ ವ್ಯವಸ್ಥೆ ಇದೆ ಇದೇ ರೀತಿ ಮುಂದುವರೆಯಬೇಕು ಎಂದು ಹೇಳುತ್ತಿದ್ದೇನೆ. 20-25 ವರ್ಷಗಳಿಂದ ನಮ್ಮ ಜನರಿಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ ಹಣ ಇಲ್ಲದೆ ಕಾಲಕ್ಕೆ ಸರಿಯಾಗಿ ಕೆಲಸಗಳನ್ನು ಮಾಡದಿರುವುದರಿಂದ ಆ ಹಳ್ಳಿಗಳು ಮುಂದೆ ಬರುವುದಕ್ಕಾಗಿಲ್ಲ. ಇದಕ್ಕೆ ಪಂಚಾಯಿತಿಗಳೊಂದೇ ಕಾರಣವಲ್ಲ. ಅವರಿಗೆ ಏನು ಸಂಪನ್ಮೂಲ ಕೊಡುತ್ತಿದ್ದೀರಿ ಅದು ಸರಿಯಾಗಿ ಹಂಚಿಕೆಯಾಗಿದ್ದರೆ. ಪ್ರತಿಯೊಂದು ಪಂಚಾಯಿತಿಗೆ ಇಷ್ಟಿಷ್ಟು ಎಂದು ಸರಿಯಾಗಿ ಹಂಚಿದ್ದರೆ ಅಲ್ಲಿ ರಸ್ತೆ ಸೌಕರ್ಯ, ದೀಪದ ಸೌಕರ್ಯ ಮುಂತಾದ ಸೌಕರ್ಯಗಳನ್ನು ಮಾಡಬಹುದಾಗಿತ್ತು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನೂ ಸರಿಯಾಗಿ ಹಂಚಿಕೆ ಮಾಡಬಹುದು ಆದ್ದರಿಂದ ಈಗ ಯಾವ ರೀತಿ ಪಂಚಾಯಿತಿ ವ್ಯವಸ್ಥೆ ಇದೆ ಇದನ್ನೇ ಮುಂದುವರೆಸಿಕೊಂಡು ಹೋಗಬೇಕು ಮಂಡಲ್ ಪಂಚಾಯಿತಿಗಳನ್ನು ಮಾಡುವುದು ವ್ಯಾವಹಾರಿಕವಾಗಿ ಸರಿಯಲ್ಲ ಎಂದು ಹೇಳುತ್ತಿದ್ದೇನೆ. 10 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿಯನ್ನು ಮಾಡಬೇಕು ಎನ್ನುವ ಏನುವ ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಇದು ಆಡಳಿತ ದೃಷ್ಟಿಯಿಂದ ಸರಿಹೋದರೂ ವ್ಯಾವಹಾರಿಕ ದೃಷ್ಟಿಯಿಂದ ಸರಿಯಲ್ಲ 10 ಸಾವಿರ ಜನಸಂಖ್ಯೆಗೆ 50 ಸಾವಿರ ರೂಪಾಯಿ ಕೊಟ್ಟರೆ ಅದು ಹೆಡ್‌ಕ್ವಾರ್ಟರ್ಸ್‌ನಲ್ಲಿ ಖರ್ಚಾಗುತ್ತದೆಯೇ ವಿನಹ ಎಲ್ಲಾ ಕಡೆಗೆ ಸರಿಯಾಗಿ ಹಂಚಿಕೆಯಾಗುವುದಿಲ್ಲ. ಇದರಿಂದ ಅನ್ಯಾಯವಾಗುತ್ತದೆ. ತಾವು ಏನು ಪ್ರಾವಿಷನ್ ಮಾಡಿದ್ದೀರಿ ಇದರ ಪ್ರಕಾರ ಎಲ್ಲ ಹಳ್ಳಿಗಳಿಗೂ ಸರಿಸಮಾನವಾಗಿ ಹಂಚಿಕೆಯಾಗುತ್ತದೆ ಎಂಬ ಬಗ್ಗೆ ಗ್ಯಾರಂಟಿ ಇದಯೇ ? ಸೂಪರ್‌ವಿಷನ್ ಮಾಡುವುದಕ್ಕೆ ಅಧಿಕಾರ ಇದೆಯೆ ? ಅಧಿಕಾರ ಚಲಾಯಿಸುವುದಕ್ಕೆ ಸರಿಯಾಗಿ ಅವಕಾಶ ಕಲ್ಪಿಸಲಾಗಿದೆಯೆ ? ಇಲ್ಲ ನಾವು 25 ವರ್ಷಗಳಿಂದ ನೋಡುತ್ತಿದ್ದೇನೆ ಪಂಚಾಯಿತಿಗಳಲ್ಲಿ ಯಾವ ಕೆಲಸಗಳೂ ಆಗಿಲ್ಲ ಅಲ್ಲಿ ಕೊಡುವ ಹಣ ಹೆಡ್‌ಕಾರ್ಟರ್ಸ್‌ನಲ್ಲಿ ಮಾತ್ರ ಖರ್ಚಾಗಿದೆ. ಆ ದೃಷ್ಟಿಯಿಂದ ಈಗ ಏನು ಪಂಚಾಯಿತಿ ವ್ಯವಸ್ಥೆ ಇದೆ, ಇದೆ ರೀತಿ ಮುಂದುವರೆಯಬೇಕು ಎಂದು ಹೇಳುತ್ತಿದ್ದೇನೆ. ಮಂಡಲ್ ಪಂಚಾಯಿತಿಗಳು ಮಾಡುವುದರಿಂದ ನಮ್ಮ ಅನ್ಯಾಯವಾಗುಗುತ್ತದೆ. ಎಂದು ಪಂಚಾಯಿಗಳವರು ನಿರ್ಣಯ ಮಾಡಿ ಸರ್ಕಾಕ್ಕೆ ಕಳುಹಿಸಿದ್ದಾರೆ. ಬಲವಂತರಾಯ್ ಕಮಿಟಿಯಲ್ಲಿ ಅಶೋಕ ಮೆಹ್ತಾ ಕಮಿಟಿಯಲ್ಲಿ......

ಶ್ರೀ ಅಬ್ದುಲ್ ನಜೀರ್ ಸಾಬ್ --ಮಾನ್ಯ ಭೀಮಣ್ಣ ಖಂಡ್ರೆಯವರ ಜಿಲ್ಲೆಯಲ್ಲಿ ಕೆಲವರು ಒಪ್ಪದಿದ್ದರೂ ಸಾರ್ವತ್ರಿಕವಾಗಿ ಪಂಚಾಯಿತಿ ಅಧ್ಯಕ್ಷರುಗಳ ಸಮ್ಮೇಳನದಲ್ಲಿ ಸ್ವಾಗತ ಮಾಡಿದ್ದಾರೆ ನಾನು ಧಾರವಾಡ, ಬೆಳಗಾವಿ, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಗಿ ನೋಡಿದ್ದೇನೆ. ಸಾರ್ವತ್ರಿಕವಾಗಿ ಇದಕ್ಕೆ ಸ್ವಾಗತ ಇದೆ. ಬೀದರ್‌ನಲ್ಲಿ, ಗುಲ್ಬರ್ಗದಲ್ಲಿ ಕೆಲವರು ಒಪ್ಪದಿದ್ದರೂ ಕೆಲವು ಜನ ಸ್ವಾಗತ ಮಾಡಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.--ನಿಮ್ಮ ಅನುಭವ ಹಾಗೆ ನನ್ನ ಅನುಭವ ಹೀಗೆ. ತಾಲ್ಲೂಕು ಬೋರ್ಡ್‌ಗಳಿಗೆ ಎಂ. ಎಲ್. ಎ. ಗಳು ಅಧ್ಯಕ್ಷರಾಗಬೇಕೆಂದು ಹೇಳುತ್ತೀರಿ ತಾಲ್ಲೂಕು ಬೋರ್ಡ್ ಬಗ್ಗೆ ತಮಗೆ ಅನುಭವ ಏನು ಇದೆ ಸ್ವಾಮಿ ? ನಾನು ಒಂದು ಮಾತನ್ನು ಕೇಳುತ್ತೇನೆ. ನೀವು ಹೋದ ಕಡೆ ಜನರು ತಾಲ್ಲೂಕು ಬೋರ್ಡ್ ಬೇಕು ಎಂದು ಹೇಳಿದರೋ ಅಥವಾ ಬೇಡ ಎಂದು ಹೇಳಿದರೋ ? ತಾಲ್ಲೂಕು ಪಂಚಾಯಿತಿಗಳು ಯೂಸ್‌ಲೆಸ್ ಆಗಿವೆ. ಇವಕ್ಕೆ ಅಧಿಕಾರ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್ .-- ಸಭಾಪತಿಯವರೇ, ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ತಾಲ್ಲೂಕುಗಳು ಇವೆ. ತಾಲ್ಲೂಕು ಬೋರ್ಡ್ ಪದ್ಧತಿ ಈಗ ಇರುವುದೇ ಎರಡು ರಾಜ್ಯಗಳಲ್ಲಿ. ಅಭಿವೃದ್ಧಿ ಕಾರ್ಯಗಳಿಗೋಸ್ಕರ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತಾಲ್ಲೂಕು ಸಮಿತಿಗಳನ್ನು ಇಟ್ಟುಕೊಂಡಿದ್ದೇವೆ. ಬೇರೆ 70-80 ಪರ್ಸೆಂಟ್ ರಾಜ್ಯಗಳಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಇದೆ.

ಶ್ರೀ ಭೀಮಣ್ಣ ಖಂಡ್ರೆ.-- ತಾವು ಎಲ್ಲಿಗೆ ಹೋದರೂ ಜನರು ಪಂಚಾಯಿತಿ ಬೇಡಮಂಡಲ್ ಪಂಚಾಯಿತಿ ಬೇಕು ಎಂದು ಹೇಳಿದರೆಂದು ಹೇಳಿದಿರಿ ನೀವು ಹೋದ ಕಡೆ ತಾಲ್ಲೂಕು ಪಂಚಾಯಿತಿಗಳಿಗೆ ಏನೂ ಅಧಿಕಾರ ಇಲ್ಲ, ಅವು ಸುಮ್ಮನೆ ಹೆಸರಿಗೆ ಇವೆ ಎಂದು ಯಾರೂ ಹೇಳಲಿಲ್ಲವೇ ? ಹಾಗೂ ಇವುಗಳ ಅಧ್ಯಕ್ಷರನ್ನಾಗಿ ಎಂ. ಎಲ್. ಎ. ಗಳನ್ನು ಮಾಡ ಬೇಕೆಂದು ನಿಮಗೆ ಯಾರು ಹೇಳಿದರು ?

ಶ್ರೀ ಅಬ್ದುಲ್ ನಜೀರ್ ಸಾಬ್ --ಮಹಾರಾಷ್ಟ್ರದಲ್ಲಿ ತಾಲ್ಲೂಕು ಸಮಿತಿಗಳು ಇವೆ. ಅವುಗಳಿಗೆ ಏನು ಒಂದು ಅಧಿಕಾರ ಇದೆಯೋ ಆ ಅಧಿಕಾರವನ್ನೇ ಈ ಸಮಿತಿಗಳಿಗೂ ಕೊಟ್ಟಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.--ಮಹಾರಾಷ್ಟ್ರದಲ್ಲಿ ಇರುವಂತೆ ತಂದಿದ್ದೇವೆಂದು ಹೇಳುವುದು ಸರಿಯೇ? ತಾವು ಈ ಬಗ್ಗೆ ಇಲ್ಲಿನ ಜನರ ಅಭಿಪ್ರಾಯನ್ನು ಕೇಳುವುದು ಬೇಡವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.--ಅಧ್ಯಕ್ಷರೇ, ಮಾನ್ಯ ಖಂಡ್ರೆಯವರು ಒಳ್ಳೆಯವರು ಎಂದು ನಾವು

ತೆಗೆದುಕೊಂಡಿದ್ದೇವೆ. ಅವರ ಒಳ್ಳೆಯತನ ಹಾಗೂ ಆದರ್ಶವನ್ನು ನಾವು ಏಕೆ ತೆಗೆದುಕೊಳ್ಳಬಾರದು ? ಪಶ್ಚಿಮ ಬಂಗಾಳ, ಗುಜರಾತ್ ಹಾಗೂ ಮಹಾರಾಷ್ಟ್ರವನ್ನು ಉದಾಹರಣೆಯಾಗಿ ಇಟ್ಟುಕೊಂಡು ಇದನ್ನು ತಂದಿದ್ದೇವೆ.

ಉಪಾಧ್ಯಕ್ಷರು -- ಸ್ವಲ್ಪ ಹೊತ್ತಿನ ಹಿಂದೆ ತಾವು ಸದನದಲ್ಲಿ ಇರಲಿಲ್ಲ. ಆಗ ಮಾನ್ಯ ಭೀಮಣ್ಣ ಖಂಡ್ರೆಯವರು ಮಾತನಾಡುವಾಗ ಮಾನ್ಯ ಮಂತ್ರಿಗಳಿಗೆ ತಾಲ್ಲೂಕು ಸಮಿತಿ ರಚನೆ ಮಾಡುವ ಬಗ್ಗೆ ಅಭಿಪ್ರಾಯ ವಿರಲಿಲ್ಲ, ಆದರೆ ಯಾರದೋ ಒತ್ತಡದಿಂದ ಇದನ್ನು ತಂದಿದ್ದಾರೆ ಎನ್ನುವ ಅಭಿಪ್ರಾಯವನ್ನು ಸೂಚಿಸಿದರು. ಆ ಅನುಮಾನವನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಅವರು ಈಗ ಪ್ರಶ್ನೆ ಹಾಕುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.-- ಗ್ರಾಮಹಂತ ಹಾಗೂ ಜಿಲ್ಲಾ ಹಂತದ ಎರಡು ಗುರಿಗಳನ್ನು ಇಟ್ಟುಕೊಂಡು ಈ ಮಸೂದೆಯನ್ನು ತಂದಿದ್ದೇವೆ. ಇವೆರಡರ ಮಧ್ಯೆ ಈಗಾಗಲೇ ತಾಲ್ಲೂಕು ಹಂತದ ಆಡಳಿತದ ವ್ಯವಸ್ಥೆ ಇದೆ. ಇದು ನಡೆದುಕೊಂಡು ಬಂದಿದೆ. ಈ ಒಂದು ಮಧ್ಯಂತರ ಹಂತ ಒಂದು ಟ್ರಾನ್ಸಿಷನಲ್ ಪೀರಿಯಡ್ ಎಂಬ ವಿಷಯ ನನಗೂ ಮನವರಿಕೆಯಾಯಿತು. ಮತ್ತು ಈ ಒಂದು ಅಭಿಪ್ರಾಯ ಜಂಟೀ ಸಲಹಾ ಸಮಿತಿಯ ಸದಸ್ಯರಲ್ಲೂ ಬಂದಿತು. ಮತ್ತು ಹೊರ ರಾಜ್ಯಗಳಲ್ಲಿನ ವ್ಯವಸ್ಥೆ ನೋಡಿದಾಗ ಇದರ ಅಗತ್ಯತೆ ನಮಗೆ ಕಂಡು ಬಂದಿತು. ಈ ಟ್ರಾನ್ಸಿಷನಲ್ ಪೀರಿಯಡ್‌ನಲ್ಲಿ ಒಂದು ಮಧ್ಯತರ ತಾಲ್ಲೂಕು ಸಮಿತಿ ಇಟ್ಟುಕೊಳ್ಳಬೇಕೆಂದು ಅಶೋಕ್ ಮೆಹತಾ ಕಮಿಟಿ ಸಹಾ ಅಭಿಪ್ರಾಯ ಪಟ್ಟಿತು. ಇದನ್ನು ನಾವು ಸಹ ಇಟ್ಟುಕೊಂಡಿದ್ದೇವೆ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ತಾಲ್ಲೂಕು ಸಮಿತಿ ಬರೀ ಅಡ್ವೈಸರಿ ಬೋರ್ಡ್ ಇದ್ದಹಾಗೆ ಇವೆ. ಇವಕ್ಕೆ ಯಾವ ಎಕ್ಸಿಕ್ಯೂಟಿವ್ ಪವರ್ರೂ ಇಲ್ಲ

ಶ್ರೀ ಭೀಮಣ್ಣ ಖಂಡ್ರೆ --ಮಾನ್ಯ ಮಂತ್ರಿಗಳು ಏನು ಮಧ್ಯಂತರ ಅಗತ್ಯ ಇದೆ ಎಂದು ಹೇಳುತ್ತಿದ್ದಾರೆ ಆ ಮಾತು ಸರಿಹೋಗುವುದಿಲ್ಲ. ಇವತ್ತು ಅವರಿಗೆ ಸೂಪರ್‌ವೈಸ್ ಮಾಡುವುದಕ್ಕೆ ಏನು ಅಧಿಕಾರ ಇದೆ ? ಸೂಪರ್‌ವೈಸ್ ಮಾಡುವ ಸಲುವಾಗಿ ಅವರಿಗೆ ಏನು ಅಥಾರಿಟಿ ಇದೆ ? ಎನ್‌ಫೋರ್ಸ್‌ಮೆಂಟ್ ಮಾಡಲು ಏನು ಅಥಾರಿಟಿ ಇದೆ ? ಮಹಾರಾಷ್ಟ್ರದಲ್ಲಿ ತಾಲ್ಲೂಕು ಬೋರ್ಡಿಗೆ ಡೈರೆಕ್ಟ್ ಎಲಕ್ಷನ್ ಇದೆ. ಆದರೆ ಇಲ್ಲಿ ಅದು ಇಲ್ಲ. ಏನೋ ಒಂದು ಒತ್ತಡಕ್ಕೆ ಇದನ್ನು ತಂದಿದ್ದೀರಿ ಎಂದು ಕಾಣುತ್ತದೆ. ಇದರ ಬಗ್ಗೆ ತಮಗೆ ಬಿಟ್ಟದ್ದು. ಇವತ್ತು ಗ್ರಾಮ ಸಭೆಗಳಿಗೆ ಏನೂ ಅಧಿಕಾರ ಇಲ್ಲ. ಇವರ ಪರಿಸ್ಥಿತಿ ಯಾವ ರೀತಿ ಆಗಿದೆ ಎಂದರೆ ಸುಮ್ಮನೆ ಒಂದು ಕಡೆ ಬಂದು ಕೂರುತ್ತಾರೆ, ನಂತರ ಮಾತನಾಡುತ್ತಾರೆ. ನಂತರ ಟೀ ಕುಡಿದು ಹೊರಟುಹೋಗುತ್ತಾರೆ. ಇವರಿಗೆ ಏನು ಅಧಿಕಾರ ಇದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಇವತ್ತುಗ್ರಾಮ ಸಭೆ ಹಾಗೂ ತಾಲ್ಲೂಕು ಸಭೆಗಳಲ್ಲಿ ಯಾವುದೇ ಅಧಿಕಾರ ಇಲ್ಲ. ಇವತ್ತು ತಾಲ್ಲೂಕು ಸಭೆಗಳಲ್ಲಿ ಎಂ. ಎಲ್. ಎ. ಗಳೇ ಅಧ್ಯಕ್ಷರಾಗಬೇಕೆಂದು ಯಾರು ಇವರಿಗೆ ಐಡಿಯಾ ಕೊಟ್ಟರೋ ನನಗೆ ಗೊತ್ತಿಲ್ಲ. ಇದರಿಂದಾಗಿ ಇವತ್ತು ಜನ ಬೇಸತ್ತು ಬೊಬ್ಬೆ ಹೊಡೆಯುತ್ತಿದ್ದಾರೆ ಎಲ್ಲಾ ಕಡೆ ಇವರ ಜನವನ್ನೇ ತುಂಬಿ, ಎಲ್ಲಾ ಅಥಾರಿಟೀನೂ ಇವರೇ ತೆಗೆದುಕೊಂಡು ಎಲ್ಲವನ್ನೂ ಇವರೇ ನುಂಗಿಹಾಕಿದಾರೆಂದು ಜನ ಹೇಳುತ್ತಿದ್ದಾರೆ. ತಮ್ಮ ಒಂದು ಉದಾತ್ತ ಭಾವನೆಯಿಂದ ಇವತ್ತಿನ ದಿವಸ ಹಳ್ಳಿಗಳ ಮಟ್ಟದಲ್ಲಿ ಒಂದು ಲೀಡರ್‌ಶಿಪ್ ಬರಬೇಕಾಗಿದೆ. ಇವತ್ತಿನ ದಿವಸ ಗ್ರಾಮ ಮಟ್ಟದಲ್ಲಿ ಲೀಡರ್‌ಶಿಪ್ ಬರುವುದಕ್ಕೆ ಅವಕಾಶ ಇಲ್ಲವಾಗಿದೆ. ಕಾರಣ ಇವತ್ತಿನ ದಿವಸ ಗ್ರಾಮ ಪ್ರದೇಶದವರು ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗುವುದಕ್ಕೆ ಸಾಧ್ಯವಿಲ್ಲವಾಗಿದೆ ಕಾರಣ ಅಲ್ಲಿ ಎಂ. ಎಲ್. ಎ. ಗಳು ಇರುತ್ತಾರೆ. ಇದರಿಂದ ವಿಲೇಜ್ ಲೀಡರ್‌ಶೀಪ್ ಬೆಳೆಯುತ್ತದೆಯೇ ? ಇದನ್ನು ವಿಚಾರ ಮಾಡಿದಾಗ ಬಹಳ ವಿಷಾದವೆನ್ನಿಸುತ್ತದೆ. ಈ ಬಗ್ಗೆ ತಿದ್ದುಪಡಿ ತರಬೇಕೆಂದು ನಾನು ಇವತ್ತು ಹೇಳುತ್ತಿರುವುದು ಇವತ್ತಿನ ದಿವಸ ಒಬ್ಬ ಎಂ. ಎಲ್. ಎ. ಆದವನಿಗೆ 500 ರೂಪಾಯಿ ವಿಶ್ರಾಂತಿ ವೇತನ ಸಿಗುತ್ತದೆ ಆದರೆ ಈ ಮಂಡಳಿಯ ಸದಸ್ಯರು ಏನು ಆರಿಸಿ ಬಂದಿರುತ್ತಾರೆ ಅವರಿಗೂ ವಿಶ್ರಾಂತಿ ವೇತನವನ್ನು ಏಕೆ ಕೊಡುವುದಿಲ್ಲವೆಂದು ನಾನು ಕೇಳುತ್ತೇನೆ. ಇವತ್ತಿನ ದಿವಸ ನಿಮಗೆ ಪೆನ್‌ಷನ್ ಬೇಕಾಗಿತ್ತು ಅದಕ್ಕೆ ಮಾಡಿಕೊಂಡಿರಿ. ಇದರಲ್ಲಿ ಆ ಪಕ್ಷ ಈ ಪಕ್ಷ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ನಿಮ್ಮ ಕೈಯಲ್ಲಿ ಕಾನೂನು ಮಾಡುವ ಅಧಿಕಾರ ಇದ್ದಾಗ ನಿಮ್ಮ ಒಂದು ಗರೀಬಿಯನ್ನು ದೂರ ಮಾಡಿಕೊಳ್ಳುವ ಸಲುವಾಗಿ ಈ ರೀತಿ ಮಾಡಿದ್ದೀರಿ. ತಮ್ಮ ದೃಷ್ಟಿಯಲ್ಲಿ ತಾಲ್ಲೂಕು ಬೋರ್ಡ್ ಎಂದರೆ ಏನು ? ಇವತ್ತಿನ ದಿವಸ ಆರಿಸಿ ಬಂದ ಎಲ್ಲ ಶಾಸಕರಿಗೂ 500 ರೂಪಾಯಿ ಪೆನ್‌ಷನ್ ಸಿಗುವಾಗ 3-4-20 ವರ್ಷಗಳ ಕಾಲ ಕೆಲಸ ಮಾಡಿರುವ ನಮಗೆ ಪೆನ್‌ಷನ್ ಬೇಡವೇ ಎಂದು ಅವರು ಕೇಳು

ತ್ತಾರೆ. ಈ ಬಗ್ಗೆಯೇ ಬೀದರ್ ನಲ್ಲಿನ ತಾಲ್ಲೂಕು ಬೋರ್ಡ್ ಸಮಿತಿಯವರು ಪೆನ್ ಷನ್ ಬಗ್ಗೆ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿದರು. ನಿಮ್ಮ ಪೆನ್ ಷನ್ ಹೆಚ್ಚು ಮಾಡಿಕೊಳ್ಳಲು ಏನು ತಿದ್ದುಪಡಿ ತರುತ್ತಿದ್ದೀರಿ ಅದೇ ರೀತಿ ಅಮೆಂಡ್‌ಮೆಂಟ್ ತಂದು ನಮಗೂ ಪೆನ್ ಷನ್ ಕೊಡಿ ಎಂದು ಕೇಳಿದ್ದಾರೆ. ಇವತ್ತು ನಾನು ಗ್ರಾಮ ಸಭೆ ಹಾಗೂ ಗ್ರಾಮಪಂಚಾಯಿತಿಗಳ ಬಗ್ಗೆ ಸ್ಪಷ್ಟ ಅಭಿಪ್ರಾಯ ವನ್ನು ಕೊಡಬೇಕಾಗಿದೆ. ಇವತ್ತಿನ ನನ್ನ ಅನುಭವದ ಪ್ರಕಾರ ಪ್ರತಿಯೊಂದು ಪಂಚಾಯಿತಿಗಳಿಗೂ ಹೆಚ್ಚು ಅಧಿಕಾರ ಕೊಟ್ಟು, ಹೆಚ್ಚು ರೊಕ್ಕಕೊಟ್ಟು ಅವರಿಂದ ಕೆಲಸ ಮಾಡಿಸಬೇಕು ಎಂದು ನಾನು ಹೇಳುತ್ತೇನೆ. ತಾಲ್ಲೂಕು ಬೋರ್ಡ್ ಏನಿತ್ತು ಅಲ್ಲಿ ಅದೇ ಪದ್ಧತಿ ಇರಲಿ. ಚುನಾಯಿತ ಪ್ರತಿನಿಧಿಗಳು ಬರಬೇಕು. ಅವರಿಗೆ ಹೆಚ್ಚಿನ ಅಧಿಕಾರವನ್ನು ಮತ್ತು ಹೆಚ್ಚಿನ ಹಣ ಸಹಾಯವನ್ನು ನೀಡಿದರೆ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆಂದು ಹೇಳುತ್ತೇನೆ. ನಾನು ನೂರಾರು ತಾಲ್ಲೂಕು ಬೋರ್ಡುಗಳಲ್ಲಿ ಯಾವ ಪ್ರಕಾರ ನಡೆಯುತ್ತಿದೆ ಎಂಬುದನ್ನು ನೋಡಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ 173 ತಾಲ್ಲೂಕು ಬೋರ್ಡುಗಳ ಪೈಕಿ ಬಹುಪಾಲು ತಾಲ್ಲೂಕು ಬೋರ್ಡುಗಳಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಎನ್. ಆರ್. ಇ. ಪಿ. ಆಗಲಿ ಯಾವ ಯೋಜನೆ ಆಗಲಿ ಎಲ್ಲ ಕೆಲಸಗಳು ಸರಿಯಾಗಿ ನಡೆಯದೆ ಬರೀ ಹೆಸರಿನ ಪಟ್ಟಿ ಇರುವುದು ಸರಿಯಲ್ಲ. ಅದಕ್ಕೆ ತಾಲ್ಲೂಕು ಬೋರ್ಡಿನಲ್ಲಿ ಎಲೆಕ್ಟೆಡ್ ಬಾಡಿ ಇರಬೇಕೆಂದು ಹೇಳುತ್ತೇನೆ. ತಮ್ಮದು, ನಮ್ಮದು ಹಾಗೂ ಎಲ್ಲರ ಅನುಭವಕ್ಕೆ ಬಂದಿರತಕ್ಕ ಒಂದು ಮಾತು ಏನೆಂದರೆ ಎಲ್ಲೆಲ್ಲಿ ಈ ಪ್ರಕಾರ ಚುನಾವಣೆ ನಡೆಯುತ್ತದೆ. ಆ ಸಮಯದಲ್ಲಿ ಜಿಲ್ಲಾ ಪರಿಷತ್ತಿನ ನನ್ನ ದೃಷ್ಟಿಯಲ್ಲಿ ನೇರವಾಗಿ ಚುನಾವಣೆ ಆಗಬೇಕು. ಅಧ್ಯಕ್ಷ, ಉಪಾಧ್ಯಕ್ಷ ಎಂದು ಏನು ತಾವು ಸ್ಥಾನಗಳನ್ನು ಕೊಟ್ಟಿದ್ದೀರಿ ಅದಕ್ಕೆಲ್ಲ ನೇರವಾಗಿ ಚುನಾವಣೆ ಆಗಬೇಕು. ಮಂಡಲ್ ಸಮಿತಿಯ ಸದಸ್ಯರು ಬ್ಯಾಂಕಿನಲ್ಲೂ ಸದಸ್ಯರಾಗಿರುತ್ತಾರೆ. ನಾನು ಬಾರ್ಡರ್ ಏರಿಯಾದಲ್ಲಿರತಕ್ಕವನು. ಆಂಧ್ರ, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಅಧ್ಯಕ್ಷನಾಗುವಾಗ 4-4 ದಿನ ಮೊದಲು ಯಾರ್ಯಾರು ಆರಿಸಿ ಬಂದು ಓಟು ಕೊಡುತ್ತಾರೋ ಅಂಥವರನ್ನು ಜೀಪಿನಲ್ಲಿ ತೆಗೆದುಕೊಂಡು ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಾಗಿರುವ ನಿದರ್ಶನಗಳು ಇವೆ. ಏಕೆಂದರೆ ಅವರಿಗೆ ರಾಜ್ಯ ಮಂತ್ರಿಗಳ ಸ್ಥಾನವನ್ನು ಕೊಟ್ಟಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಗ್ರಾಮೀಣ ನ್ಯಾಯ ಪಂಚಾಯಿತಿಯ ವಿಷಯ ಮಾತನಾಡುತ್ತಾ ಸಂಶಯ ವ್ಯಕ್ತಪಡಿಸುತ್ತೀರಲ್ಲ. ಜಿಲ್ಲಾ ಪರಿಷತ್ತಿನ ಅಧ್ಯಕ್ಷನಾಗುವುದಕ್ಕೇ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ರಾಜ್ಯಸಭಾ ಸದಸ್ಯರಾಗುವುದಕ್ಕೆ ಇನ್ನು ಎಷ್ಟು ಖರ್ಚು ಮಾಡಬೇಕು ? ನಿಮ್ಮ ವ್ಯವಸ್ಥೆಯಲ್ಲೇ ಅನಿಷ್ಟ ಇದ್ದಾಗ ಗ್ರಾಮೀಣ ಜನರ ಮೇಲೆ ಏಕೆ ಕೈ ತೋರಿಸುತ್ತೀರಿ ? ಈ ಪಾಪದ ಕೂಸಿಗೆ ಕಾರಣರಾದವರು ಯಾರು ? ಅವರ ಮೇಲೆ ಏತಕ್ಕೆ ಹೇಳುತ್ತೀರಿ ? ಮೊದಲು, ನಾವು ಭ್ರಷ್ಟರಲ್ಲನೆ ಎಂಬುದನ್ನು ಯೋಚನೆಮಾಡಬೇಕು.

ಶ್ರೀ ಭೀಮಣ್ಣ ಖಂಡ್ರೆ.—ರಾಜ್ಯಸಭಾ ಸದಸ್ಯರು ಲೋಕಸಭಾ ಸದಸ್ಯರು ಭ್ರಷ್ಟಾಚಾರ ಮಾಡುತ್ತಿದ್ದಾರೆಂದರೆ ನಾವು ಭ್ರಷ್ಟರಾಗಬೇಕೆ ? ತಾವು ಏನು ಹೇಳಿದಿರಿ ಅದನ್ನು ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ರಾಜ್ಯಸಭಾ ಸದಸ್ಯರಾಗುವುದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದ್ದಾರೆಂಬುದು ನಮ್ಮ ನಿಮ್ಮ ಅನುಭವಕ್ಕೆ ಬಂದಿದೆ. ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದರೆ ಇಲ್ಲಿಯೂ ಮಾಡಬೇಕೆಂದು ಅರ್ಥವೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಭ್ರಷ್ಟಾಚಾರ ನಡೆಯುತ್ತದೆಂದು ರಾಜ್ಯಸಭೆ ಬೇಡ, ಲೋಕಸಭೆ ಬೇಡ, ಜಿಲ್ಲಾ ಪರಿಷತ್ತು ಬೇಡ ಎಂದು ಹೇಳಿದ ಹಾಗೆ ಆಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ರಾಜ್ಯ ಸಭಾ ಸದಸ್ಯರ ಕೈಯಲ್ಲಿ ಏನೂ ಇಲ್ಲ. ವಿಧಾನಸಭಾ ಸದಸ್ಯರ ಕೈಯಲ್ಲೂ ಏನೂ ಇಲ್ಲ. ಆದರೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡುತ್ತಿದ್ದೀರೋ ಅವನು ಮಂತ್ರಿಗೆ ಸಮಾನ, ಅವನೇ ಜಿಲ್ಲೆಯ ರಾಜ. ಅವನು ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸಿದ್ದರೆ ಆರಿಸಿ ಬರುವಾಗ ಮತಗಳನ್ನು ಖರೀದಿ ಮಾಡಬಹುದು. ಇವತ್ತು ಏನು ನಡೆಯುತ್ತಿದೆ ಎಂಬುದು ನಿಮಗೆ ಗೊತ್ತಿದೆ. ಅದಕ್ಕೆ ನಾವು ನೀವು ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಇಂಥದ್ದು ಆಗಬಾರದೆಂದು ನೇರವಾಗಿ ಚುನಾವಣೆ ಇಟ್ಟಾಗ ಯಾರಿಗೆ ಹಣ ಕೊಡುತ್ತಾರೆ, ಯಾರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗುತ್ತಾರೋ ಅವರಿಗೆ ನೇರ ಚುನಾವಣೆ ಆಗಬೇಕು. ಈ ಪ್ರಕಾರ ಆಗುವುದು ಸರಿಯಲ್ಲ. ಚುನಾಯಿತರಲ್ಲದವರು ಅಧ್ಯಕ್ಷರಾಗಿರುವುದು ಸರಿಯಲ್ಲ. ಹಣಕಾಸಿನ ಆಯೋಗದ ಬಗ್ಗೆ ಏನು ಹೇಳಿದಿರಿ ಅದು ಒಳ್ಳೆಯದು ; ಅದನ್ನು ನಾನು ಸ್ವಾಗತಿಸುತ್ತೇನೆ. ನನ್ನ ಮಾತನ್ನು ಮುಖ್ಯ ಮಂತ್ರಿಗಳು ಕೂಡ ಕೇಳಿದರೆ ಒಳ್ಳೆಯದು. ಇವತ್ತು ನೀವು ಏನು ಆಯವ್ಯಯವನ್ನು ಮಂಡನೆ ಮಾಡಿದ್ದೀರಿ ಅದರಲ್ಲಿ ಹತ್ತಿಮ್ಮೈ ಸೂರಿನ ಇರಿಗೇಷನ್ ಪ್ರಾಜೆಕ್ಟ್‌ಗಳ ಸಲುವಾಗಿ 55 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರೆ

ನಮ್ಮ ಹಿಂದುಳಿದ ಜಿಲ್ಲೆಗೆ ಎಷ್ಟು ಹಣ ಖರ್ಚಾಗಿದೆ ಅಷ್ಟನ್ನು ಈ ವರ್ಷ ಇಟ್ಟಿಲ್ಲವೆಂದು ಹೇಳುತ್ತೇನೆ. ಈ ಆಯವ್ಯಯದಲ್ಲಿ ದೊಡ್ಡ ಮಾತುಗಳನ್ನಾಡಿ, ಘೋಷಣೆಗಳನ್ನು ಮಾಡಿದ ತಾವು ಏನಾದರೂ ಹಣ ಇಟ್ಟಿದ್ದೀರಾ ಎಂದು ನೋಡಿದರೆ ಏನು ಇಟ್ಟಿಲ್ಲ. ಈ ಭಾಗ ಹಿಂದಿದೆ, ಇಲ್ಲಿರತಕ್ಕ ಅಸಮತೋಲನ ದೂರ ಆಗಬೇಕೆಂಬ ಭಾವನೆಯಿಂದ ಹಣವನ್ನು ಇಡಬೇಕಾಗಿತ್ತು. ಆದರೆ ನೀವು ಎಲ್ಲಿ ಇಡುತ್ತೀರಿ ನಿಮಗೆ ಎಲ್ಲಿ ಬೇಕೋ ಅಲ್ಲಿ ಇಡುತ್ತೀರಿ, ಅದಕ್ಕೆ ರೂಲ್ಸ್ ಇಲ್ಲ, ರೆಗ್ಯುಲೇಷನ್ ಇಲ್ಲ, ಕೋಡ್ ಆಫ್ ಕಾಂಡಕ್ಟ್ ಇಲ್ಲ. ನೈತಿಕ ಬಂಧನ ಮೊದಲೇ ಇಲ್ಲ. ಹಿಂದೆ ಇರುವವರು ಹಿಂದೆಯೇ ಇದ್ದಾರೆ ಮುಂದೆ ಬರುವವರು ಮುಂದೆ ಬರುತ್ತಿದ್ದಾರೆ. ಆದ್ದರಿಂದ ತಾವು ಹಣ ಹಂಚುವಾಗ ಹಣಕಾಸಿನ ಆಯೋಗದ ಸೂಚನಾ ರೀತ್ಯ ಯಾವ ಪ್ರಕಾರ ಕೊಡಬೇಕೋ ಆ ಪ್ರಕಾರ ಕೊಡಬೇಕೆಂದು ಹೇಳುತ್ತೇನೆ. ಹಣಕಾಸಿನ ಆಯೋಗ ಯಾವ ರೀತಿ ವರದಿ ಕೊಡುತ್ತದೋ ಆ ಪ್ರಕಾರ ಎಲ್ಲಾ ಜಿಲ್ಲೆಗಳನ್ನು ಮತ್ತು ತಾಲ್ಲೂಕುಗಳನ್ನು ಗಮನಕ್ಕೆ ತೆಗೆದುಕೊಂಡು ಕೊಡಬೇಕು ಹಣಕಾಸಿನ ಆಯೋಗದವರು ಕೂಡ ಎಲ್ಲವನ್ನು ನೋಡಿಕೊಂಡು ಯಾವ ಭಾಗ ಎಷ್ಟು ಹಿಂದಿದೆ, ಅದಕ್ಕೆ ಎಷ್ಟು ಅವಶ್ಯಕತೆ ಇದೆ ಮತ್ತು ಅದನ್ನು ಯಾವ ಪ್ರಕಾರ ಮುಂದೆ ತರಬಹುದೆಂಬುದನ್ನು ಮುಂದಿಟ್ಟುಕೊಂಡು ಮಾಡಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ರಾಜ್ಯ ಮಟ್ಟದಲ್ಲಿ ಒಂದು ವಿಚಾರ ಬಂದಿತ್ತು. ಜಿಲ್ಲಾ ಮಟ್ಟದಲ್ಲಿ ಹೇಗೆ ಜಿಲ್ಲಾ ಪರಿಷತ್ತುಗಳನ್ನು ಮಾಡುತ್ತಿರೋ ಹಾಗೆ ರಾಜ್ಯ ಮಟ್ಟದಲ್ಲಿ ಪಂಚಾಯಿತಿ ರಾಜ್ಯವನ್ನು ಮಾಡಬಹುದೆಂದು ಹೇಳುತ್ತೇನೆ. ಆ ರೀತಿ ಮಾಡಿದರೆ ಒಳ್ಳೆಯದೆಂದು ಮಿತ್ರರೊಬ್ಬರು ಹೇಳುತ್ತಿದ್ದರು. ಇದನ್ನು ತಾವು ವಿಚಾರ ಮಾಡಿದರೆ ಒಳ್ಳೆಯದು

ಶ್ರೀ ಅಬ್ದುಲ್‌ನಜೀರ್ ಸಾಬ್.---ಆ ವಿಚಾರ ಕಾಯಿದೆಯಲ್ಲಿ ಬೇಡ. ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದಲ್ಲಿ ಪಂಚಾಯಿತಿ ರಾಜ್ಯವನ್ನು ಮಾಡಬೇಕೆಂದು ಇದೆ. ಅದನ್ನು ಮಾಡೋಣ ಪಶ್ಚಿಮ ಬಂಗಾಳದಲ್ಲಿ ಈ ಒಂದು ವ್ಯವಸ್ಥೆ ಇದೆ. ಆ ರೀತಿ ಇಲ್ಲಿಯೂ ಮಾಡುವುದಕ್ಕೆ ಬರುತ್ತದೆ.

ಶ್ರೀ ಮಲ್ಲಾರಗೌಡ ಪಾಟೀಲ್.---ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೆ. ಆದರೆ ನನಗೆ ಮಾತನಾಡಲಿಕ್ಕೆ ಅವಕಾಶ ಇಲ್ಲವೆಂದು ಸುಮ್ಮನಿದ್ದೆ.

ಶ್ರೀ ಭೀಮಣ್ಣ ಖಂಡ್ರೆ.--- ಈ ಮಸೂದೆಯಲ್ಲಿ ಯಾವ ಯಾವ ಪ್ರಕಾರ ಲೋಪದೋಷಗಳಿವೆ ಅವನ್ನು ತೋರಿಸುವುದಕ್ಕೆ ಮೊದಲು ಎರಡು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನ್ಯಾಯ ಪಂಚಾಯಿತಿ ಬಗ್ಗೆ ಒಂದು ಮಾತು ಹೇಳುವುದಾದರೆ, ಅದರಲ್ಲಿ ತಮಗಿರತಕ್ಕ ಐಡಿಯ ಒಳ್ಳೆಯದು, ವಿಚಾರ ಒಳ್ಳೆಯದು. ಹಿಂದೆ ಅಲ್ಲಿ ಇಲ್ಲಿ ಖರ್ಚು ಮಾಡಲಾರದ ಹಣವನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತಿದ್ದರು. ಆ ರೀತಿ ಈಗಲೂ ಕೂಡ ತೀರ್ಮಾನ ತೆಗೆದುಕೊಂಡರೆ ಒಳ್ಳೆಯದು ಖರ್ಚು ಕಡಿಮೆ ಆದರೆ ಇವತ್ತಿನ ಕಾಲದಲ್ಲಿ ಸರಿ ಹೋಗುವುದಿಲ್ಲ. ಕಲಿಯುಗದಲ್ಲಿ ಯಾರು ಆರಿಸಿ ಬಂದು ಏನೇನು ಕೆಲಸ ಮಾಡಿದ್ದಾರೆಂಬ ನಿದರ್ಶನಗಳು ನಮಗೂ ಗೊತ್ತಿವೆ. ನಿಮಗೂ ಗೊತ್ತಿವೆ. ನ್ಯಾಯ ಪಂಚಾಯಿತಿಯನ್ನು ಪಂಚಾಯಿತಿದಾರರಿಗೆ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು ಎಂಬುದೂ ಗೊತ್ತು ತಾವು ಪಶ್ಚಿಮ ಬಂಗಾಳಕ್ಕೆ ಹೋಗಿ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದ್ದೀರಿ. ಈ ಸಂದರ್ಭದಲ್ಲಿ ನನಗೆ ಒಂದು ಮಾತು ನೆನಪಿಗೆ ಬರುತ್ತದೆ. ಎಲ್ಲೆಲ್ಲಿ 2 ಟೈರ್ ಸಿಸ್ಟಂ ಇದೆ ಅಲ್ಲೆಲ್ಲ ಹೋಗಿದ್ದೆ ; ಆದರೆ ಯಾರು ಅದಕ್ಕೆ ಸರಿಯಾದ ಉತ್ತರ ಕೊಡಲಿಲ್ಲವೆಂದು ಹೇಳಿದಿರಿ. ನ್ಯಾಯ ಪಂಚಾಯಿತಿಗಳು ಎಲ್ಲೆಲ್ಲಿ ಯಶಸ್ವಿಯಾಗಿವೆ ಎಂದು ಕೇಳಿದಾಗ ಎಲ್ಲಿಯೂ ಆಗಿಲ್ಲವೆಂದು ಹೇಳಿದಿರಿ ನನ್ನ ಪ್ರಕಾರವೂ ಎಲ್ಲಿಯೂ ಯಶಸ್ವಿಯಾಗಿಲ್ಲ. ನ್ಯಾಯ ಪಂಚಾಯಿತಿಗಳು ಎಂದು ಎಲ್ಲೆಲ್ಲಿ ಮಾಡಿದ್ದಾರೋ ಅಲ್ಲೆಲ್ಲ ತುಂಬಾ ಅಶಾಂತಿ ಆಗಿದೆ. ಮರ್ಡರ್ ಆಗಿದೆ, ಬ್ರೀಚ್ ಅಫ್ ಪೀಸ್ ಆಗಿದೆಯೇ ಹೊರತು ಯಶಸ್ಸಿ ಮಾತ್ರ ಆಗಿಲ್ಲನೆಂಬುದು ನನ್ನ ಅನುಭವ ; ಮತ್ತು ಪತ್ರಿಕೆಗಳಲ್ಲಿ ಬಂದಿರುವುದನ್ನು ಕೂಡ ನೋಡಿದ್ದೇನೆ.

ಶ್ರೀ ಸಿ ದೊಡ್ಡಬೋರೇಗೌಡ.---ಈಗ ಇರತಕ್ಕ ಪಂಚಾಯಿತಿಯಲ್ಲಿ ನ್ಯಾಯ ದೊರೆಯುತ್ತಿದೆಯೇ ? ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಭೀಮಣ್ಣ ಖಂಡ್ರೆ --- ಆ ಮಾತು ಬೇರೆ, ಇದರದ್ದು ಬೇರೆ. ಅಲ್ಲಿ ಕೇಳುವವರು ಇದ್ದಾರೆ. ನ್ಯಾಯ ಪಂಚಾಯಿತಿಯಲ್ಲಿ ಆರಿಸಿದವರಿಗೆ ಕೇಳುವವರು ಬೇರೆ ಯಾರು ಇಲ್ಲ. ಬಾಂಬೆ ಕರ್ನಾಟಕದ ರೀತಿಯಲ್ಲಿ ಆರಿಸುತ್ತಿದ್ದಾರೆ. 30–40 ವರ್ಷವಾದರೂ ಅವನು ಒಂದು ಪಕ್ಷದ ಮನುಷ್ಯ. ಆ ಪಕ್ಷದಿಂದ ಆರಿಸಿ ಬಂದವನು. ಅಲ್ಲಿ ಕುಳಿತವನ ಪರಿಸ್ಥಿತಿ ಹೇಗೆ ಇರುತ್ತದೆಂದು ಗೊತ್ತು. ಭೂ ಮಂಡಲಿಯ ವಿಚಾರವನ್ನೇನು ಹೇಳಿದರು ಅಲ್ಲಿ ಕೂಡ ಏನಾಗುತ್ತಿದೆ ಎಂದು ಗೊತ್ತು.

1-P M.

ಮಾನ್ಯ ಅಧ್ಯಕ್ಷರೆ, ನನಗೆ ಮೊದಲನೆಯದಾಗಿ ಕನ್ನಡ ಸರಿಯಾಗಿ ಬರುವುದಿಲ್ಲ. ಅದು ಭೂ ನ್ಯಾಯ

ಮಂಡಲಿಯೋ, ಅಥವಾ ಭೂ ಅನ್ಯಾಯ ಮಂಡಲಿಯೋ, ಅಂತೂ ಈ ಮಂಡಲಿಯಲ್ಲಿ ಅಂದರೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ ನನ್ನ ಅನುಭವದಲ್ಲಿ ಈ ಬಗ್ಗೆ ಹೇಳುವುದಾದರೆ ಇನತ್ತು ಸಭೆಯಮುಂದೆ ಏನೊಂದು ವಿಚಾರವನ್ನು ತಂದಿದ್ದೀರಿ ಇದನ್ನು ಡ್ರಾಪ್ ಮಾಡಿದರೆ ಒಳ್ಳೆಯದು. ನಮ್ಮ ಕಡೆ "ಅಗಲ್‌ಗಿರ, ಪೀಛೆ ಹುಷಾರ್" ಎಂದು ಒಂದು ಗಾದೆ ಮಾತನ್ನು ಹೇಳುತ್ತಾರೆ

Mr. Deputy Speaker.--The House now stands adjourned to meet again at 2 O' clock.

(The House adjourned at One Minute past one of the Clock to meet again at Two of the clock in the afternoon.)

2-P. M.

ಸಭೆಯು ಪುನಃ 2 ಗಂಟೆ 10 ನಿಮಿಷಗಳಿಗೆ ಪ್ರಾರಂಭವಾಯಿತು

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸಿದ್ಧರಾಮೇಶ್ವರವರ ಕೊಲೆಯ ಸಿ. ಬಿ. ಐ. ತನಿಖೆ ಬಗ್ಗೆ ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ರಾಮಕೃಷ್ಣ ಹೆಗಡೆ.-- ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಈ ಸದನದಲ್ಲಿ ಗುಲ್ಬರ್ಗದ ಕ್ರಾಂತ್ರ ಪತ್ರಿಕೆಯ ಸಂಪಾದಕರಾದ ಶ್ರೀ ಸಿದ ರಾಮೇಶ್ ಅವರ ಕೊಲೆ ವಿಚಾರ ಇಲ್ಲಿ ಚರ್ಚೆಯಾಯಿತು. ಆಗ ಇಲ್ಲಿ ಕೆಲವು ಮಾನ್ಯ ಸದಸ್ಯರು ಇದರ ತನಿಖೆಗೆ ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಆಗ್ರಹಪಡಿಸಿದರು. ಶ್ರೀಮಾನ್ ಒಡೆಯರಾಜ್ ಅವರು ಸಿ ಬಿ ಐ ಮುಖಾಂತರು ಇದನ್ನು ತನಿಖೆ ಮಾಡಿಸಬೇಕೆಂದು ಸೂಚಿಸಿದರು. ಈಗಾಗಲೇ ನಾನು ಸಿ ಒ ಡಿ. ತನಿಖೆಗೆ ಆರ್ಡರ್ ಮಾಡಿದ್ದೇನೆ. ಆದರೂ ಮಾನ್ಯ ಸದಸ್ಯರ ಒಂದು ಸೂಚನೆಯನ್ನು ಗಮನಿಸಿ ಇದರಲ್ಲಿ ಯಾವುದೇ ತರಹದ ಪ್ರಭಾವ ಅಥವಾ ಪಕ್ಷಪಾತಕ್ಕೆ ಒಳಗಾಗದೆ ತನಿಖೆ ನಡೆಯಬೇಕು ಎಂಬ ಉದ್ದೇಶದಿಂದ ಸಿ ಬಿ.ಐ. ಮೂಲಕ ತನಿಖೆಯಾಗಬೇಕೆಂದು ನಮ್ಮ ಸರ್ಕಾರ ತೀರ್ಮಾನಿಸಿದೆ. ಈ ಬಗ್ಗೆ ನಾನು ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ

Sri G. P. Vodeyaraj.--I congratulate the Hon'ble Chief Minister.

Sri Ramakrishna Hegde --Thank you.

ಶ್ರೀ ಧರ್ಮಸಿಂಗ್.-- ನಾರಾಯಣ್‌ಸಿಂಗ್ ಇದರ ತನಿಖೆಗೆ ಹೌಸ್-ಕಮಿಟಿ ರಚನೆಯಾಗಬೇಕೆಂದು ಬೆಳಿಗ್ಗೆ ನಾನು, ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ಶ್ರೀ ಒಡೆಯರಾಜ್ ಅವರು ಕೇಳಿ ಕೊಂಡಾಗ ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚೆ ಮಾಡಲು ತಮ್ಮ ಛೇಂಬರ್‌ಗೆ ಆಹ್ವಾನಿಸಿದರು. ಅದರಂತೆ ಮುಖ್ಯಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ಅಧ್ಯಕ್ಷರ ಛೇಂಬರ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದರು. ಈಗ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಯಾವುದೇ ಸಂಶಯವಿಲ್ಲದ ರೀತಿಯಲ್ಲಿ ತನಿಖೆ ಮಾಡಲು ಇದನ್ನು ಸಿ.ಬಿ.ಐ.ಗೆ ವಹಿಸಲು ಒಪ್ಪಿದ್ದಾರೆ. ಅದಕ್ಕಾಗಿ ನಾನೂ ಕೂಡ ಅವರಿಗೆ ತಮ್ಮ ಮೂಲಕ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

V. Financial Business

(i) Supplementary Demands For The Year 1983-84

Discussion And Voting of Supplementary Demands For Grants For the Year 1983-84.

Mr. Deputy Speaker.-- Hon'ble Chief Minister to move the motion.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).--ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸಿನ ಮೇರೆಗೆ ಈ ಕೆಳಗಿನ ಪ್ರಸ್ತಾಪಗಳನ್ನು ಮಂಡಿಸುತ್ತಿದ್ದೇನೆ.

1) 1984 ರ ಮಾರ್ಚ್ 31 ರ ಅಂತ್ಯದೊಳಗಾಗಿ "ಕೃಷಿಗೆ ಸಂಬಂಧಿಸಿದ (ತೋಟಗಾರಿಗೆ ಮತ್ತು ಕ್ಷಾಮ ಪೀಡಿತ ಪ್ರದೇಶಗಳ ಕಾರ್ಯಕ್ರಮವನ್ನು ಹೊರತುಪಡಿಸಿ," ವೆಚ್ಚಗಳ ಬಗ್ಗೆ ಸಂದಾಯ ಮಾಡ